International Journal of Kannada Research 2020; 6(3): 151-159

International Journal of Kannada Research
www.kannadajournal.com

**ISSN: 2454–5813**
IJKR 2020; 6(3): 151-159
© 2020 IJKR
www.kannadajournal.com
Received: 19-06-2020
Accepted: 21-07-2020

**ಶರಣಪ್ಪ ಬಸವಂತ ಕ್ಯಾಸ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗ ವಿಶ್ವವಿದ್ಯಾಲಯ,
ಕಲಬುರಗಿ

**Corresponding Author:**
**ಶರಣಪ್ಪ ಬಸವಂತ ಕ್ಯಾಸ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗ ವಿಶ್ವವಿದ್ಯಾಲಯ,
ಕಲಬುರಗಿ

# ಎಚ್.ಎಸ್. ಶಿವಪ್ರಕಾಶ ಅವರ ಕಾವ್ಯ ಸಾಹಿತ್ಯದ ಸಾಂಸ್ಕೃತಿಕ ನೆಲೆ

**ಶರಣಪ್ಪ ಬಸವಂತ ಕ್ಯಾಸ**

ಹೊಸಗನ್ನಡ ಸಾಹಿತ್ಯಿಕ ಪ್ರಕಾರಗಳಲ್ಲಿ ಕಾವ್ಯ ಇಂದು ಬೃಹತ್ ಹೆಮ್ಮರವಾಗಿ ಬೆಳೆಯುತ್ತಿದೆ. ಹೊಸಗನ್ನಡ ಸಾಹಿತ್ಯದ ಕವಿಗಳು ಆಯಾ ಕಾಲದ ಅನುಭವಗಳೊಂದಿಗೆ ಪರಂಪರೆಯ ಜೊತೆಗೆ ಗಾಢ ಮತ್ತು ಆಪ್ತ ಅನುಸಂಧಾನವನ್ನು ನಡೆಸುತ್ತವೆ. ವಿಶಿಷ್ಟವಾದ ಕಾವ್ಯವನ್ನು ಕಟ್ಟಕೊಟ್ಟಿದ್ದಾರೆ. ವಿಭಿನ್ನ ಸಮುದಾಯ–ಸಂಸ್ಕೃತಿಯಿಂದ ಬಂದಿರುವ ಲೇಖಕರು ಬೇರೆ ಬೇರೆ ಸಂವೇದನೆಗಳಿಂದ ಆಧುನಿಕ ಕಾವ್ಯಲೋಕವನ್ನು ಗಟ್ಟಿಗೊಳಿಸಿದ್ದಾರೆ ಹೊಸಗನ್ನಡ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಪ್ರಮುಖವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯವೆಂದು ಕಾಲಘಟ್ಟಗಳನ್ನಾಗಿ ವಿಭಾಗಿಸಿಕೊಂಡಿದ್ದೇವೆ. ಈ ಸಂದರ್ಭದ ಸಾಹಿತ್ಯವು ನವೋದಯ ಸಾಹಿತಿಗಳು ಪ್ರಾಸಕ್ಕೆ, ಗೇಯಕ್ಕೆ ಮಹತ್ವ ನೀಡಿದರೆ, ನವ್ಯ ಕವಿಗಳು ಮುಕ್ತಛಂದಸ್ಸನ್ನು ಆರಿಸಿಕೊಂಡು ಸಾಹಿತ್ಯ ರಚನೆಗೆ ತೊಡಗಿದರು. ದಲಿತ ಮತ್ತು ಬಂಡಾಯ ಕವಿಗಳಿಗೆ ತಮ್ಮ ಕಾವ್ಯ ಜನಸಾಮಾನ್ಯರಿಗೆ ತಲುಪಬೇಕಾಗಿದ್ದರಿಂದ ಅವರು ಜನಭಾಷೆಯಲ್ಲಿ ಸಾಹಿತ್ಯವನ್ನು ಕಟ್ಟಿದರು. ಹೀಗೆ ಒಂದೊಂದು ಅಭಿವ್ಯಕ್ತಿಯ ಕ್ರಮದಲ್ಲಿ ಒಂದೊಂದು ಕಾಲಘಟ್ಟಗಳು ಹುಟ್ಟಿಕೊಂಡವು.

ಕನ್ನಡದ ಕಣ್ವ ದಿ.ಬಿ.ಎಂ.ಶ್ರೀಯವರ ಇಂಗ್ಲೀಷ್ ಗೀತೆಗಳು ನವೋದಯ ಸಾಹಿತ್ಯ ಸೃಷ್ಠಿಗೆ ಬುನಾದಿಯಾಯಿತು. ಶ್ರೀಯವರೇ ಹೇಳುವಂತೆ 'ಇವಳ ಸೊಬಗನವಳು ತೊಟ್ಟು ನೋಡಬಯಸಿದೆ. ಅವಳ ತೊಡುಗೆ ಇವಳಿಗಿಟ್ಟು ಹಾಡಬಯಸಿದೆ' ಎನ್ನುವಲ್ಲಿ ವಸಾಹತುಶಾಹಿ ಶಿಕ್ಷಣದ ಗಾಢ ಪ್ರಭಾವವನ್ನು ಕಾಣಲಾಯಿತು. ಅಲ್ಲದೇ ನವೋದಯ ಕಾವ್ಯದ ಮೇಲೆ ಹೆಚ್ಚಾಗಿ ತತ್ವಪದಕಾರರ ಸಾಹಿತ್ಯ, ಜನಪದ ಸಾಹಿತ್ಯ ಇಂಗ್ಲೇಂಡಿನ ರೋಮ್ಯಾಂಟಿಸಂ(ರಮ್ಯವಾದ)ದ ಪ್ರಭಾವವಿರುವುದನ್ನು ಕಾಣುತ್ತೇವೆ. ನವೋದಯ ಕವಿಗಳಾದ ಗೋವಿಂದ ಪೈ, ಬೇಂದ್ರೆ ವಿ.ಸಿ, .ಡಿ.ವಿ.ಜಿ, ಮಾಸ್ತಿ, ಕುವೆಂಪು. ಪುತಿನ ಜಿ.ಪಿ,ರಾಜರತ್ನ. ಕೆ.ಎಸ್. ನಿಸಾರ್ ಅಹಮದ್, ಕೆ.ಎಸ್.ನರಸಿಂಹಸ್ವಾಮಿ, ಜಿ.ಎಸ್.ಶಿವರುದ್ರಪ್ಪ, ವಿನಾಯಕ, ಆನಂದ, ಆನಂದಕಂದ, ದಿನಕರ ದೇಸಾಯಿ, ಸಾಲಿರಾಮಚಂದ್ರ, ಚೆನ್ನವೀರ ಕಣವಿ ಮೊದಲಾದ ಕವಿಗಳು ಪ್ರಕೃತಿ ವರ್ಣನೆ, ಕನ್ನಡ ನಾಡು–ನುಡಿಯ ಪ್ರೇಮ, ಸಾಮಾಜಿಕ ಕಾಳಜಿ, ಪ್ರೀತಿ–ಪ್ರೇಮ–ಪ್ರಣಯ, ರಾಷ್ಟ್ರಭಕ್ತಿ, ಆತ್ಮೋದ್ಧಾರ ಮತ್ತು ಆಧ್ಯಾತ್ಮದಂತಹ ವಿಷಯಗಳನ್ನು ತಮ್ಮ ಕಾವ್ಯದ ಕಥಾವಸ್ತುವನ್ನಾಗಿಸಿಕೊಂಡು ಕಾವ್ಯ ಬರೆಯತೊಡಗಿದವರು.

ಪ್ರಗತಿಶೀಲ ಕಾಲಘಟ್ಟದಲ್ಲಿ ತ.ರಾ.ಸು. ಬಸವರಾಜ ಕಟ್ಟಿಮನಿ, ಕುಮಾರ ವೆಂಕಣ್ಣಯ್ಯ, ಅ.ನ.ಕೃ. ಮೊದಲಾದವರು ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಕಾವ್ಯ ರಚನೆಗೆ ತೊಡಗಿದವರು. ಇವರು ಹೆಚ್ಚಿನ ಆದ್ಯತೆಯನ್ನು ನಾಟಕಗಳಿಗೆ ನೀಡಿದರು. ಆದರೆ ಕಾವ್ಯಕ್ಕೆ ಅವರು ಗಮನಹರಿಸಲಿಲ್ಲ ನಂತರ ಹೈದರಾಬಾದ್ ಕರ್ನಾಟಕ (ಇಂದಿನ ಕಲ್ಯಾಣ ಕರ್ನಾಟಕ) ಪ್ರದೇಶದಲ್ಲಿ ಹಸಿವು, ನಿರುದ್ಯೋಗ, ಬಡತನ, ರೈತರ ಆತ್ಮಹತ್ಯೆ, ಬರಗಾಲ ಮೊದಲಾದವುಗಳ ಕುರಿತಾದ ಕಾವ್ಯಗಳು ಹುಟ್ಟಿದರೆ, ಬೆಂಗಳೂರು ಭಾಗದಲ್ಲಿ ಭಾವಗೀತೆಗಳು ಸೃಷ್ಟಿಯಾದವು.

ನಂತರ ನವ್ಯ ಕಾಲಘಟ್ಟದ ಕವಿಗಳ ಮೇಲೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಗಾಢವಾದ ಪರಿಣಾಮ ಬೀರಿತು. ನವ್ಯದವರು ಕೆಲವೇ ವಿಷಯ ವಸ್ತುವನ್ನಿಟ್ಟುಕೊಂಡು ಕಾವ್ಯವನ್ನು ಬರೆಯುತ್ತಿದ್ದರಿಂದ ನವ್ಯದವರಿಗೆ ಕ್ಲೀಷೆಯಾಗಿ ಕಂಡಿತು. ವಾಸ್ತವಲೋಕದ ಹೊಸ ಬದುಕಿನ ಆಲೋಚನೆಗಳನ್ನು ಕಾವ್ಯವನ್ನಾಗಿಸಿಕೊಂಡು ಕಾವ್ಯವನ್ನು ಬರೆದರು. ವಿ.ಕೃ.ಗೋಕಾಕ್, ಗೋಪಾಲಕೃಷ್ಣ ಅಡಿಗರು ಪ್ರಜ್ಞಾಪೂರ್ವಕವಾಗಿ ಆ ಕಾಲದ ಬದುಕಿನ ಒತ್ತಡಕ್ಕೆ ಮಣಿದು ನವ್ಯಕಾವ್ಯವನ್ನು ಮೊಟ್ಟ ಮೊದಲಿಗೆ ಪ್ರಕಟಿಸಿದರು. ಹೀಗಾಗಿ ಅಡಿಗರು ಒಂದು ರೀತಿಯ ನವ್ಯದ ಬಾಗಿಲನ್ನು ತೆರೆದಂತಾಯಿತು. ಈ ಮಾತನ್ನು ಅನುಸರಿಸಿಯೇ ಪಿ.ಲಂಕೇಶರವರು 'ಅಡಿಗರು ಒಂದು ಜನಾಂಗದ ಕಣ್ಣನ್ನು ತೆರೆಸಿದ ಕವಿ'

ಎಂದು ಕರೆದಿರುವುದು. ಇದರ ನಂತರ ಎ.ಕೆ.ರಾಮಾನುಜನ್, ಪಿ.ಲಂಕೇಶ, ಚೆನ್ನವೀರ ಕಣವಿ, ಚಂದ್ರಶೇಖರ ಕಂಬಾರ, ಸುಮತೀಂದ್ರ ನಾಡಿಗ, ಯು.ಆರ್.ಅನಂತಮೂರ್ತಿ, ಎಚ್.ಎಸ್.ವೆಂಕಟೇಶಮೂರ್ತಿ, ಎಚ್.ಎಂ.ಚೆನ್ನಯ್ಯ, ಎಂ.ಅಕಬರ ಅಲಿ, ಕೆ.ವಿ.ತಿರುಮಲೇಶ ಮತ್ತು ಎಚ್.ಎಸ್.ಶಿವಪ್ರಕಾಶ್ ಮೊದಲಾದವರು ನವ್ಯ ಕಾಲದ ಕಾವ್ಯಗಳನ್ನು ಶ್ರೀಮಂತಗೊಳಿಸಿದರು.

ಈ ನವ್ಯಕಾಲದ ಬಹುತೇಕ ಲೇಖಕರ ಕಾವ್ಯದ ವಸ್ತು ಕಾಮ, ಸಾವು, ಮಾನವನ ಅಸ್ತಿತ್ವ, ಸಿನಿಕತನ, ಭ್ರಮನಿರಸನ, ಹಳಹಳಿಕೆ, ಮನಸ್ಸಿನ ಹೊಯ್ದಾಟ, ತುಯ್ದಾಟ, ನೈತಿಕ ದ್ವಂದ್ವ ಮೊದಲಾದವುಗಳಾಗಿದ್ದವು. ಹೀಗೆ ಇವರು ಸಾಂಕೇತಿಕ ಪ್ರತಿಮೆಗಳನ್ನು ಎಥೇಚ್ಚವಾಗಿ ಬಳಸಿಕೊಂಡು ಪ್ರಾಸಗಳನ್ನು ತೊರೆದು, ವ್ಯಂಗ, ವಿಡಂಬನೆ, ನೇರನುಡಿಯ ವಿಭಿನ್ನ ಶೈಲಿಯ ಕಾವ್ಯವನ್ನು ಬರೆದರು.

ಹೊಸಗನ್ನಡ ಸಾಹಿತ್ಯದ ಕೊನೆಯ ಹಂತ ದಲಿತ ಬಂಡಾಯ ಸಾಹಿತ್ಯ. ಎಪ್ಪತ್ತರ ದಶಕದಲ್ಲಿ 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ' ಎನ್ನುವ ಧೋರಣೆಯನ್ನಿಟ್ಟುಕೊಂಡು ಮುನ್ನುಗಿತು. ಇವರಿಗೆ ಮಾರ್ಕ್ಸ್‌ವಾದ, ಲೋಹಿಯಾವಾದ, ಪೆರಿಯರ್‌ವಾದ, ಅಂಬೇಡ್ಕರವಾದಗಳ ದಟ್ಟಪ್ರಭಾವ ಬೀರಿತು. ಅದರ ಜೊತೆ ಜೊತೆಗೆ ದಕ್ಷಿಣ ಆಫ್ರಿಕಾದ ಕಪ್ಪುಸಾಹಿತ್ಯ, ಆಂಧ್ರದ ವಿಪ್ಲವ ಸಾಹಿತ್ಯ, ಮಹಾರಾಷ್ಟ್ರದ ದಲಿತ ಪ್ಯಾಂಥರ್ರ್ಸ, ಕೇರಳದ ಪೆರಿಯಾರ್ ಸಾಹಿತ್ಯ ಮುಂತಾದ ಪ್ರಜಾಸತ್ತಾತ್ಮಕ ಎಡಪಂಥೀಯ ವಿಚಾರಗಳು ಮತ್ತು ಕವಿಗಳು ಅವರನ್ನು ದಲಿತ ಬಂಡಾಯದಲ್ಲಿ ಬರವಣಿಗೆಗೆ ತೊಡಗುವಂತೆ ಪ್ರೇರೆಪಿಸಿದವು. ಅಲ್ಲದೇ ತುರ್ತುಪರಿಸ್ಥಿತಿ, ಬಸವಲಿಂಗಪ್ಪನವರ ಬೂಸಾಸಾಹಿತ್ಯ ಪ್ರಕರಣಗಳು ಬಂಡಾಯ ಸಾಹಿತ್ಯಕ್ಕೆ ಭದ್ರಬುನಾದಿಯನ್ನು ಒದಗಿಸಿದವು.

ಡಾ.ಸಿದ್ದಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ದೇವನೂರು ಮಹಾದೇವ, ಚಂದ್ರಶೇಖರ ಪಾಟೀಲ್, ಕಾಳೇಗೌಡ ನಾಗವಾರ, ಅರವಿಂದ ಮಾಲಗತ್ತಿ, ಸರಜೂಕಾಟ್ಕರ್, ರಂಜಾನ್‌ದರ್ಗಾ ಮುಂತಾದವರು ಬಂಡಾಯ ಸಾಹಿತ್ಯದಲ್ಲಿ ತೀವ್ರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಅನ್ಯಾಯ, ಅಸಮಾನತೆ, ಶೋಷಣೆಯ ವಿರುದ್ಧ ಪ್ರತಿಭಟನಾತ್ಮಕ ಬೆಂಕಿಯ ಕಿಡಿಗಳಾಗಿ ಕಾವ್ಯಗಳು ಹೊರಬಂದವು. ಅದರಲ್ಲೂ ಮಾನವೀಯತೆಯ ಹುಡುಕಾಟಕ್ಕಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲೂ ಕೂಡ ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಕುಂ.ವೀರಭದ್ರಪ್ಪ, ಎಸ್.ಎಸ್.ಹಿರೇಮಠ, ಅಲ್ಲಮಪ್ರಭು ಬೆಟ್ಟದೂರು, ಪ್ರೊ. ಹೆಚ್.ಟಿ. ಪೋತೆ, ಡಾ. ಬಸವರಾಜ ಸಬರದ, ಗವಿಸಿದ್ದ ಬಳ್ಳಾರಿ ಕಾಶೀನಾಥ ಅಂಬಲಗಿ, ಪ್ರಭು ಖಾನಾಪುರೆ, ಬಾಬು ಭಂಡಾರಿಗಲ್, ಆಂಜನೇಯ ಜಾಲಿಬೆಂಚಿ ಮೊದಲಾದವರು ಕೂಡ ಸಮಾನತೆಯ ಆಶಯಗಳಿಗಾಗಿ ಕಾವ್ಯಗಳನ್ನು ಕಟ್ಟಿದರು.

ಜೊತೆಗೆ ಇದೇ ಸಂದರ್ಭದಲ್ಲಿ ಅನೇಕ ಮಹಿಳಾ ಲೇಖಕಿಯರು ಕೂಡ ಕಾವ್ಯವನ್ನು ಕಟ್ಟಿದ್ದರು. ಅವರಲ್ಲಿ ಬಿ.ಟಿ.ಲಲಿತಾ ನಾಯಕ, ಗೀತಾನಾಗಭೂಷಣ, ಮಾಲತಿ ಪಟ್ಟಣಶೆಟ್ಟಿ, ಸ.ಉಷಾ, ಸವಿತಾ ನಾಗಭೂಷಣ, ಶಶಿಕಲಾ ವೀರಯ್ಯ ಸ್ವಾಮಿ, ಸುಕನ್ಯಾ ಮಾರುತಿ, ಎಚ್.ಎಸ್.ಮುಕ್ತಾಯಕ್ಕ, ವಿಜಯಶ್ರೀ ಸಬರದ, ಜಯದೇವಿ ಗಾಯಕವಾಡ, ಮಲ್ಲಿಕಾ ಘಂಟಿ, ಪ್ರತಿಭಾ ನಂದಕುಮಾರ, ಸರಸ್ವತಿ ಚಿಮ್ಮಲಗಿ, ಪ್ರೇಮಾ ಸಿರ್ಸಿ, ಕೆ. ಷರೀಫಾ, ಎಚ್.ಎಲ್.ಪುಷ್ಪ ಮೊದಲಾದವರೆಲ್ಲಾ ಬಂಡಾಯದ ಆಶಯಗಳನ್ನು ಮೈಗೂಡಿಕೊಂಡು ಹೆಣ್ಣಿನ ಶೋಷಿತ ಬದುಕನ್ನು ಹಲವಾರು ಮುಖಗಳಲ್ಲಿ ಕಂಡರಿಸಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ಒಡ್ಡಿದ್ದಾರೆ.

ಹೀಗೆ ಪ್ರತಿ ಕ್ಷಣ ಕ್ಷಣಕ್ಕೂ ಬದಲಾಗುವ ವಿದ್ಯಾಮಾನಗಳಿಗನುಗುಣವಾಗಿ ಬರೆಯುತ್ತಿರುವ ಯುವ ಪೀಳಿಗೆಯ ಹಲವಾರು ಕವಿಗಳು ಕಾವ್ಯಗಳನ್ನು ಬರೆಯುತ್ತಿದ್ದಾರೆ. ಹೊಸ ತಲೆಮಾರಿನ ಸೂಕ್ಷ್ಮ ಸಂವೇದನೆಗಳನ್ನು ಭಾವನಾತ್ಮಕವಾಗಿ ಕಾವ್ಯದ ರೂಪದಲ್ಲಿ ಕಟ್ಟುವ ಕಲಾತ್ಮಕೆಯನ್ನು ಮೈಗೂಡಿಕೊಂಡು ಕಾವ್ಯಲೋಕವನ್ನು ಮುನ್ನಡೆಸುತ್ತಿದ್ದಾರೆ.

ಅಂತಹ ಹೊಸಗನ್ನಡದ ಹಲವಾರು ಲೇಖಕರು ಇಂದು ಜಾಗತೀಕರಣ, ಮುಕ್ತ ಮಾರುಕಟ್ಟೆಯ ಪರಿಣಾಮ, ಆಧುನಿಕ ತಂತ್ರಜ್ಞಾನದ ಹೊಸ ಆವಿಷ್ಕಾರಗಳು ಮತ್ತು ವಿದ್ಯಮಾನಗಳಿಗೆ ಮುಖಮಾಡಿ ಮನುಕುಲವನ್ನು ರಕ್ಷಿಸುವ ಕಾರ್ಯ ಇಂದು ಕಾವ್ಯದ ಮೂಲಕ ಆಗಬೇಕಿದೆ. ಅದರಲ್ಲೂ ಕನ್ನಡದ ಅಗ್ರಗಣ್ಯ ನಾಟಕಕಾರ ಮತ್ತು ಕವಿಗಳಲ್ಲಿ ಎಚ್.ಎಸ್.ಶಿವಪ್ರಕಾಶ ಅವರು ತುಂಬಾ ಪರಿಣಾಮಕಾರಿಯಾದ ಅಪರೂಪದ ಸೂಕ್ಷ್ಮ ಸಂವೇದನೆಯ ಕವಿಗಳಾಗಿ ಹೊರಹೊಮ್ಮಿದ್ದಾರೆ.

ಶಿವಪ್ರಕಾಶ ಅವರು ತಮ್ಮದೊಂದು ಸಂದರ್ಶನದಲ್ಲಿ ಬರವಣಿಗೆಯ ಕುರಿತು ಹೀಗೆ ಹೇಳುತ್ತಾರೆ, ನಾನು ಬರೆಯೋಕೆ ಶುರುಮಾಡಿದಾಗ ಇದು ಧಾರ್ಮಿಕ ಕಾವ್ಯ ಅಂದ್ಬಿಟ್ಟು ಅವಮಾನ ಮಾಡಿದ್ರು. ನನ್ನನ್ನು ವೀರಶೈವ ಸಾಹಿತಿ ಅಂತನೂ ಕರೆದ್ರು: 'ಮಹಾಚೈತ್ರ' ನಾಟಕದ ಗಲಾಟೆಯಲ್ಲಿ ವೀರಶೈವ ಸಾಹಿತಿ ಹೌದೋ ಅಲ್ಲವೋ ಅಂತ ಜಗತ್ತಿಗೆ ಗೊತ್ತಾಯ್ತು. ನನಗೆ ಪ್ರಭಾವ ಬೀರಿದ ಕವಿಗಳೆಂದರೆ, ಗೋಪಾಲಕೃಷ್ಣ ಅಡಿಗರು, ನರಸಿಂಹಸ್ವಾಮಿ, ಯು.ಆರ್.ಅನಂತಮೂರ್ತಿ, ಬೇಂದ್ರೆ, ಮಧುರಚೆನ್ನ, ಯುರ್ಮಂಜೆ ರಾಮಚಂದ್ರ ಮೊದಲಾದವರ ಕಾವ್ಯಗಳು. "ಅಲ್ಲದೇ ವಚನಕಾರರು, ಕುಮಾರವ್ಯಾಸ, ತತ್ವಪದ ಸಾಹಿತ್ಯ ಮೊದಲಾದ ಸಾಹಿತಿಗಳ ಪ್ರಭಾವದಿಂದ ಇಂಗ್ಲೀಷ್ ಕಲಿತೆ. ಆ ಇಂಗ್ಲೀಷ್ ಭಾಷೆಯ ಮೂಲಕ ಬಂದ ಬೇರೆ ಬೇರೆ ದೇಶಗಳ ಸಾಹಿತ್ಯ, ಮುಖ್ಯವಾಗಿ ಚೀನೀಕಾವ್ಯ, ಜಪಾನೀ ಕಾವ್ಯ, ಪೂರ್ವಯುರೋಪ್ ಕಾವ್ಯ, ಲ್ಯಾಟಿನ್, ಅಮೇರಿಕಾದ ಕಾವ್ಯ, ಆಫ್ರಿಕಾ ಕಾವ್ಯ ಇವೆಲ್ಲದರಿಂದ ನಾನು ಪರಿಪೂರ್ಣ ಕವಿಯಾದೆನು ಎಂದು ಹೇಳಿಕೊಂಡಿದ್ದಾರೆ."44" ಜೊತೆಗೆ ನನ್ನ ಕಾವ್ಯಭಾಷೆಯನ್ನು ನಾನು ರೂಪಿಸಿಕೊಂಡೆ, ಭಾಷೆಯ ಜೊತೆ ಜೊತೆಗೆ ಒಂದು ಸಂವೇದನೆಯನ್ನು ರೂಪಿಸಿಕೊಳ್ಳಬೇಕು. ಕಾವ್ಯದರ್ಶನ ಅಲ್ಲದೇ ಇದ್ರೂ ಕೂಡ ದರ್ಶನದ ಸೋಂಕು ಏನಿದೆ, ಅದರಿಂದ ಕಾವ್ಯದ ಭಾಷೆಗೆ ಒಂದು ನಿಶ್ಚಿತತೆ ಬರುತ್ತೆ. ಈ ಸಂದರ್ಭದಲ್ಲಿ ನನ್ನ ಮಾರ್ಕ್ಸವಾದದ ಒಂದು ಅಧ್ಯಯನ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ಅದರಿಂದ ನನ್ನ ವಿಚಾರಗಳನ್ನು ಪ್ರಭಾವಿತಗೊಳಿಸಿಕೊಂಡೆ ಎನ್ನುತ್ತಾರೆ.

ನಿನ್ನ ಕಾವ್ಯಗಳ ಹಿಂದಿನ ಶಕ್ತಿ ಯಾರು? ಎಂಬುದಕ್ಕೆ ಶಿವಪ್ರಕಾಶ ಅವರ ಮಾತುಗಳು ಹೀಗಿವೆ, ನಾಯರ್ ಅವರು ಶಿವಪ್ರಕಾಶ ಅವರನ್ನು ಸಂದರ್ಶನವೊಂದರಲ್ಲಿ 'ತಾವು ತುಂಬಾ ಪ್ರೌಢವಾದ ಕವನಗಳನ್ನು ಮೊದಮೊದಲು ಓದಿದಿರಿ. ನನಗೆ ಅದನ್ನು ಅರ್ಥಮಾಡಿಕೊಳ್ಳುವ ಸಾಮರ್ಥ ಇಲ್ಲ. ಆದರೆ ಕೊನೆಗೆ ಆ ಅಕ್ಕ–ತಂಗಿಯರ ಬಗ್ಗೆ ಒಂದು ಕವನ ಓದಿದಿರಿ. ಅದು ಅರ್ಥವಾದ್ರೂ ಅದರ ಧ್ವನಿ, ಅದು ಯಾವುದನ್ನು ಉದ್ದೇಶಿಸಿ ಹೇಳಿದ್ದೆಂದು ಅರ್ಥವಾಗಲಿಲ್ಲ ಅದನ್ನು ಹೇಳಿದರೆ ಒಳ್ಳೆಯದು ಎಂದಾಗ, ಶಿವಪ್ರಕಾಶ ಅವರು ನಮ್ಮ ಆತ್ಮೀಯ ಸ್ನೇಹಿತರಾದ, ಒಂದರ್ಥದಲ್ಲಿ ನನ್ನ ಕಾವ್ಯ ಗುರುಗಳಾದ ಕಿ.ರಂ.ನಾಗರಾಜ್‌ರವರು ಒಂದು ಮಾತನ್ನು ಹೇಳುತ್ತಿರುತ್ತಾರೆ. ಒಂದು ಕವಿತೆಯನ್ನು ನಾವು ಅರ್ಥಮಾಡಿಕೊಂಡು ಓದುವುದಿಲ್ಲ: ಅದನ್ನು ತಿಳಿಯುತ್ತೇವೆ ಅಂತ. ನಾವು ಯಾವ ಉದ್ದೇಶವನ್ನೂ ಇಟ್ಟುಕೊಂಡಿರುವುದಿಲ್ಲ. ಆ ಕತೆ ಹೇಳು ಅಂದ್ರೆ ಕತೆ ಹೇಳಬೇಕು ಅಷ್ಟೇ. ಅಜ್ಜಿ ಬಗ್ಗೆ ಅಂದ್ರೆ ಅಜ್ಜಿ ಕತೆ ಬರೆಯಬೇಕು. ಅಷ್ಟೇ ನಾನೇ ಮೊದಲು ಅರ್ಥವನ್ನು ಸಂಯೋಜಿಸಿ

ಬಿಟ್ಟಿದ್ದರೆ ನಿಮಗೆ ಯಾವ ಅರ್ಥ ಹೊಳೆಯಲು ಸಾಧ್ಯ?. ನಾನು ಅಂಥಹ ಅರ್ಥ ಇಟ್ಟುಕೊಂಡು ಬರೆಯೋದಿಲ್ಲ. ಕಾವ್ಯ ಅರ್ಥಗಳನ್ನು ಸೃಷ್ಟಿಸಬೇಕೇ ಹೊರತು ಪೂರ್ವ ನಿಯೋಜಿತ ಅರ್ಥಗಳಿಂದ ಪೀಡಿತವಾಗಿರಬಾರದು. ಅಂದ್ರೆ ಕವಿಯ ಅರ್ಥವನ್ನು ಅವನೇ ನಿರ್ಧಾರ ಮಾಡ್ಬಿಟ್ರೆ ಓದುಗನಿಗೆ ಏನಿರುತ್ತೆ? ಕೇಳುಗನಿಗೆ ಏನಿರುತ್ತೆ? ಕೆಲವು ಕೆಲವರಿಗೆ ಇಷ್ಟವಾಗುತ್ತೆ. ಕೆಲವರಿಗೆ ಇಷ್ಟವಾಗೋದಿಲ್ಲ. ನನ್ನ ಅಣುಕ್ಷಣ ಚರಿತೆ ಸಂಕಲನ ಹೊರಬಂದಾಗ ಬಹಳ ಜನ ಹೇಳಿದ್ರು ಇದರಲ್ಲಿ ಐದು ಕವಿತೆಗಳು ಮಾತ್ರ ನಮಗೆ ಇಷ್ಟವಾಗುತ್ತೆ. ಬೇರೆಯವು ಇಷ್ಟವಾಗೋಲ್ಲ ಅಂತ ನಾನು ಹೇಳಿದೆ. ಆ ಐದು ಕವಿತೆಗಳನ್ನು ಮಾತ್ರ ಇಟ್ಕೊಳ್ಳಿ. ಉಳಿದ ಕವಿತೆಗಳನ್ನು ಹರಿದು ಬಿಸಾಕಿ. ಒಬ್ಬ ಓದುಗನಿಗೋಸ್ಕರ ಬರೆಯೋದಲ್ಲ. ಎಲ್ಲ ಓದುಗರಿಗಾಗಿ ಬರೀಬೇಕು"[45]" ಎನ್ನವಂತಹ ಕಾವ್ಯ ಕಟ್ಟುವ ಕಲೆಯ ಕುರಿತಾಗಿ ತಮ್ಮ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದರು.

ಹೀಗೆ ಎಚ್.ಎಸ್.ಶಿವಪ್ರಕಾಶ ಅವರು ತಮ್ಮದೇ ಆದ ಸ್ವಂತಿಕೆ, ವಿಶಿಷ್ಠತೆಯಿಂದ ಸರ್ವರ ಗಮನವನ್ನು ಸೆಳೆದ ಹೆಸರಾಂತ ಕವಿಗಳು. ಇವರು ಕವಿಗಳಾಗಿ, ವಿಮರ್ಶಕರಾಗಿ, ವಿಚಾರವಾದಿಯಾಗಿ, ಅಂಕಣಕಾರರಾಗಿ, ನಾಟಕಕಾರರಾಗಿ, ಅನುವಾದಕರಾಗಿ, ಸಂಪಾದಕರಾಗಿ ಕನ್ನಡ ಸಾಹಿತ್ಯದ ಶ್ರೀಮುಕುಟಕ್ಕೆ ಮಹತ್ವದ ಕೃತಿರತ್ನಗಳನ್ನು ತಮ್ಮ ಪ್ರತಿಭಾವಂತಿಕೆಯಿಂದ ಕೊಡುಗೆಗಳನ್ನಾಗಿ ನೀಡಿದ್ದಾರೆ. ವೃತ್ತಿಯಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಪ್ರವೃತ್ತಿಯಿಂದ ನಾಡಿನ ಹೆಸರಾಂತ ಸಾಹಿತಿಗಳಾಗಿದ್ದಾರೆ. ವಿಶಿಷ್ಟ ಬರವಣಿಗೆಗಳಿಂದ ಕನ್ನಡಿಗರ ಮನಸ್ಸನ್ನು ಸೂರೆಗೊಂಡಿದ್ದಾರೆ. ಇವರು ಕನ್ನಡ ಮತ್ತು ಕನ್ನಡತನವನ್ನು ಜೀವನದಲ್ಲಿ ಉಸಿರಾಡಿಸಿಕೊಂಡು ಆರಾಧಿಸಿ, ಕನ್ನಡ ಪ್ರೀತಿಯನ್ನು ಬದುಕಾಗಿಸಿಕೊಂಡವರು. ಕನ್ನಡವನ್ನು ತಮ್ಮ ಕ್ರಿಯಾಶೀಲ ಬರವಣಿಗೆಯಿಂದ ಉನ್ನತ ಮಟ್ಟದ ಸ್ಥಾನಕ್ಕೇರಿದ ಮಹನೀಯರಲ್ಲಿ ಇವರೂ ಒಬ್ಬರು. ಕನ್ನಡದ ವೈವಿಧ್ಯಮಯ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಶಿವಪ್ರಕಾಶರವರು ಅವಿಸ್ಮರಣೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಎಚ್.ಎಸ್.ಶಿವಪ್ರಕಾಶರವರು ಕಾವ್ಯವನ್ನು ಕಟ್ಟುವ ಕಲೆಯನ್ನು ಕರಗತ ಮಾಡಿಕೊಂಡು ಅರ್ಥಪೂರ್ಣ ಕಲಾವಂತಿಕೆಯಿಂದ ಕೂಡಿದ ಕವಿತೆಗಳನ್ನು ಕಟ್ಟಿದ್ದಾರೆ. ಅವರ ವರ್ಣನಾಚಾತುರ್ಯ, ಸೂಕ್ಷ್ಮ ಶೈಲಿಯ ಪದಬಂಧಗಳ ಜೋಡಣೆ. ಅಸ್ತಿತ್ವದ ಅಂಶಗಳನ್ನು ಗ್ರಹಿಸಿ, ಪದಬಂಧಗಳಲ್ಲಿ ಕಟ್ಟುವ ಕೌಶಲ್ಯ ತೀವ್ರ ಆಸಕ್ತಿಯಿಂದ ಓದುಗರನ್ನು ತನ್ನತ್ತ ಸೆಳೆಯುತ್ತದೆ. ಮಾರ್ಕ್ಸವಾದದ ಆಶಯಗಳನ್ನು ಇಟ್ಟುಕೊಂಡು ಓದುಗರ ಕುತೂಹಲವನ್ನು ಮತ್ತು ಅರ್ಥವಂತಿಕೆಯು ಮೂಡಿಬರುವಂತೆ ಇವರ ಕಾವ್ಯಗಳಿವೆ.

ಶಿವಪ್ರಕಾಶ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಪ್ರಮುಖ ಕಾವ್ಯ ಸಂಕಲನಗಳು, ಮಿಲರೇಪ (1977), ಮಳೆಬಿದ್ದ ನೆಲದಲ್ಲಿ (1983) ಅಣುಕ್ಷಣ ಚರಿತೆ (1990) ಸೂರ್ಯಜಲ (1993) ನವಿಲು ನಾಗರ (1993), ಮಳೆಯೇ ಮಂಟಪ, ಮತ್ತೆ ಮತ್ತೆ, ಮಬ್ಬಿನ ಹಾಗೆ ಕಣಿವೆಯಾಸಿ ಹೀಗೆ ಮೊದಲಾದ ಕಾವ್ಯ ಸಂಕಲನಗಳನ್ನು ಹೊರತಂದಿದ್ದಾರೆ. ಈ ಕಾವ್ಯಸಂಕಲನಗಳು ಜಾಗತಿಕ ತಲ್ಲಣ ಮತ್ತು ವಾಸ್ತವ ಸಂಗತಿಗಳ ಕಡೆಗೆ ಹೆಚ್ಚಿನ ಮುಖಮಾಡಿವೆ.

ಇವರ ಕಾವ್ಯಗಳಲ್ಲಿ ಮೂಡಿಬಂದ ಕಥಾವಸ್ತುವಿನ ಆಧಾರದ ಮೇಲೆ ಪ್ರಮುಖವಾದ ನೆಲೆಗಳನ್ನು ಗುರುತಿಸಿಕೊಂಡು ಆ ನಿಟ್ಟಿನಲ್ಲಿ ಸಂಶೋಧಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಮೊದಲಾದ ಆಯಾಮಗಳ ಮೇಲೆ ಮೂಡಿಬಂದ ನೆಲೆಗಳನ್ನು ಅಧ್ಯಯಿನಿಸುವ ಮೂಲಕ ಶಿವ ಪ್ರಕಾಶ ಅವರ ಕಾವ್ಯಶಕ್ತಿಯನ್ನು ಸಂಶೋಧಿಸಲಾಗಿದೆ. ಅವರ ಕಾವ್ಯಗಳಲ್ಲಿ ಅಂತಃಶಕ್ತಿಯನ್ನು ಎತ್ತಿ ಹಿಡಿಯುವುದರ ಮೂಲಕ ಕವಿಗಳು ನಾಡಿನ ಜನರ ಮನ ಮಿಡಿದಿದ್ದಾರೆ. ಬಹುತೇಕ ಕವಿತೆಗಳು ಕನ್ನಡಕ್ಕಾಗಿ ಶ್ರಮಿಸಿದ ಶಿಷ್ಟಕವಿಗಳ ಸಾಲಿನಲ್ಲಿ ಎಚ್.ಎಸ್.ಶಿವಪ್ರಕಾಶ ಅವರ ಹೆಸರು ಮೊದಲ ಸಾಲಿನಲ್ಲಿ ಬಂದು ನಿಲ್ಲುತ್ತದೆ.

**ಪ್ರತಿಭಟನೆಯ ನೆಲೆ**

ಕಾವ್ಯ ಮತ್ತು ನಾಟಕಗಳೆರಡನ್ನು ತನ್ನೆರಡು ಬಾಹುಗಳಲ್ಲಿ ತಬ್ಬಿಕೊಂಡು ನಡೆಯುವ ವಿಕ್ರಮನಂತೆ ಕಾಣುವ ಈ ಕವಿ ನಡೆಸುತ್ತಿರುವ ಸೃಜನಶೀಲ ಕಾವ್ಯ ಪ್ರಯೋಗ ಮನುಷ್ಯನ ಪಾಡನ್ನು ಹಾಡಾಗಿಸುವ ನಿರಂತರ ಭಾವಶೋಧನೆಯ ತಾಣವಾಗಿದೆ. ಜಾನಪದ, ತತ್ವಪದ, ಪುರಾಣ, ಮಹಾಕಾವ್ಯಗಳನ್ನು ಜೀರ್ಣಿಸಿಕೊಂಡಿರುವ ಶಿವಪ್ರಕಾಶರ ಕಾವ್ಯಸೀಮೆ ಜಗದ್ವಿಸ್ತಾರವಾಗಿರುವಂತೆಯೇ! ಗ್ರಾಮಭಾರತದ ಪುಟ್ಟ ಹಳ್ಳಿಯನ್ನು ತನ್ನ ಕಾವ್ಯ ಬಿತ್ತಿಯಾಗಿಸಿಕೊಂಡಿರುವುದು ವಿಶೇಷವೇ ಸರಿ."[46]"

ಎಚ್.ಎಸ್. ಶಿವಪ್ರಕಾಶ ಅವರು ರಚಿಸಿದ ಕಾವ್ಯಗಳಲ್ಲಿ ವ್ಯಕ್ತವಾದ ಪ್ರತಿಭಟನೆಯ ನೆಲೆಗಳನ್ನು ಗುರುತಿಸಿ, ಸಂಶೋಧಿಸುವ ಮಹತ್ಕಾರ್ಯ ಇಲ್ಲಿದೆ. ಅವರ 'ಮಿಲರೇಪ' ಎಂಬ ಸಂಕಲನದ 'ನವಿಲು ಜಾತಿಯ ಗಂಡು' ಎಂಬ ಕವಿತೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಿ ಪ್ರತಿಭಟಿಸುತ್ತಾ, ಅವರನ್ನು ನಿಜರೂಪವನ್ನು ಕವಿಗಳು ಇಲ್ಲಿ ವ್ಯಕ್ತಪಡಿಸಿದ್ದಾರೆ. ಅದೆಂದರೆ,

"ಮಂದಿ ಮಧ್ಯಾಹ್ನ ಮರದಲ್ಲಿ
ಕೂತಿತು ಕಾಗೆ
ಪುಕ್ಕ ಕೆದರಿತು
ಕತ್ತು ಹೊಟ್ಟೆಗಳ ಕುಕ್ಕಿತು
ಕೊಕ್ಕಿನಿಂದ
ಆಕಾಶ ನೀಲಿಯ ಕೆಂಡ
ಉರಿದು ಕರುಕಲು ಬೂದಿ
ದಟ್ಟ ಮೋಡದ ಬೆಟ್ಟ;
ಗಂಡ ನವಿನಿನ ರೆಕ್ಕೆ
ಬಿರಿದು ಉರಿಯಂತೆ
ಬೆಳಕು ಹಸಿರಿನ ಆಟ
ಹೆಣ್ಣು ನವಿಲಿಗೋ ರೆಕ್ಕೆಗಳು
ಮಡಿಚಿಟ್ಟ ಛತ್ರಿ;
ಅದು ಕರ್‍ರಗೆ ನಿಂತು
ದಬದಬನೆ ಕಪ್ಪು ಮಳೆ
ತೊಳೆದಷ್ಟು ಎಲ್ಲ ಕಪ್ಪಾಯಿತು
ಜೀಕು ಜೀಕಿನ ನಡುವೆ
ಕಪ್ಪೆ ವಟಗುಟ್ಟಾಟ
ದೇವ ಕೊಲ್ಲಿಸಿದ
ನವಿಲು ಜಾತಿಯ ಗಂಡ
ಗುಡುಗಿಂದ;
ನವಿಲು ಜಾತಿಯ ಹೆಣ್ಣ
ಹುಡುಕುತ್ತ ಮಿಂಚು
ಕತ್ತಲೆಯ ಅಳೆಯದೆ
ಮರೆಯಾಯಿತು"[47]"
(ಮಿಲರೇಪ–ನವಿಲು ಜಾತಿನ ಗಂಡು)

'ಸ್ತ್ರೀ' ಸಮಾಜದ ಪ್ರತಿಬಿಂಬವಾಗಿದ್ದಾಳೆ. ವ್ಯವಸ್ಥೆಯು ಇಂದು ಬಿಗಡಾಯಿಸಿದ ಸಂದರ್ಭವನ್ನು ಕುರಿತು ಕವಿಗಳು ಸ್ತ್ರೀ ಪರವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಪುರುಷ ವ್ಯವಸ್ಥೆಯು ಇಂದು ಸ್ವಾರ್ಥದ ಜೀವನಕ್ಕೆ ಬಲಿಯಾಗಿ ತನ್ನನ್ನು ತಾನು ಮಾರಿಕೊಳ್ಳುವ

ಹಂತಕ್ಕೆ ತಲುಪಿದ್ದಾನೆ. ಅಂತಹವನ ಸ್ವಾಭಿಮಾನವನ್ನು ಕಟ್ಟಿಕೊಡುವುದಕ್ಕಾಗಿ ಅವನ ಅಂತಃಸತ್ವವನ್ನು ಬಡಿದೆಚ್ಚರಿಸುವ ಸಲುವಾಗಿ ಹೆಣ್ಣು ಕಾಳಿಯ ರೂಪದಲ್ಲಿ ನಿಲ್ಲಬೇಕಾಗಿದೆ. ಮಾನವನ ಅಧೋಗತಿಯನ್ನು ಕಂಡು ಕೆರಳಿ ಕೆಂಡವಾದ ಸ್ತ್ರೀ ಕಾಗೆಯ ರೂಪದಲ್ಲಿ ಸಂಬಂಧಗಳನ್ನು ಕಟ್ಟಿಕೊಳ್ಳಲು ಕರೆ ಕೊಡುತ್ತಾಳೆ.

ಆಕಾಶದಲ್ಲಿನ ನೀಲಿಬಣ್ಣವು ಕೆಂಡದಂತೆ ಉರಿದು ಕರುಕಲು ಬೂದಿಯಾಗಿ ಕಪ್ಪಾದ ವ್ಯವಸ್ಥೆಯನ್ನು ಬದಲಾಯಿಸುವ ಮನೋಭಾವನೆ ಮಹಿಳೆಯರಿಗೆ ಬರಬೇಕಾಗಿದೆ ಎಂದಿದ್ದಾರೆ. ಜೊತೆಗೆ ಗಂಡನ್ನು ನವಿಲಿನ ಜಾತಿಗೆ ಹೋಲಿಕೆ ಮಾಡುವ ಮೂಲಕ ಅವನಲ್ಲಿನ ಸುಪ್ತಪ್ರಜ್ಞೆಯನ್ನು ಜಾಗೃತಿಗೊಳಿಸುವ ಆಶಯು ಈ ಕಾವ್ಯದಲ್ಲಿದೆ. ನವಿಲಿನಲ್ಲಿಯೂ ಹೆಣ್ಣು ಮತ್ತು ಗಂಡುಗಳೆಂಬ ಜಾತಿಗಳಿದ್ದು, ಗಂಡು ನವಿಲು ಕೇವಲ ಕುಣಿತವನ್ನೇ ಕಲಿತು, ಜನಸಂಖ್ಯೆಯನ್ನು ಹೆಚ್ಚು ಮಾಡುವ ಆಶಯ ಹೊಂದಿದೆ. ಅಂದರೆ ಪುರುಷನಾದವನು ಇಂದು ಆದ್ಯತೆ ನೀಡಿರುವುದು ಹೆಣ್ಣು, ಹೊನ್ನು, ಮಣ್ಣುಗಳೆಂಬ ಮೋಹಕ್ಕೆ. ಅವುಗಳಾಚೆ ಅವನು ಬಂದಾಗ ಮಾತ್ರ ತನ್ನತನವನ್ನು ಕಟ್ಟಿಕೊಳ್ಳಬಲ್ಲನೆಂಬ ಸತ್ಯಾಂಶವನ್ನು ಈ ಕವಿತೆಯು ವಿವರಿಸುತ್ತದೆ.

ಎಚ್.ಎಸ್. ಶಿವಪ್ರಕಾಶ ಅವರು ಗ್ಯದ್ಯರೂಪದಲ್ಲಿಯೂ ಕವನಗಳನ್ನು ರಚಿಸಿದ್ದಾರೆ. ಅವುಗಳಿಗೆ ಗಪದ್ಯಗಳು ಎಂದಿದ್ದಾರೆ. ಇಲ್ಲಿಯ ಕವನವು 'ಸುರುಳಿ'ಯ ರೀತಿಯಲ್ಲಿರುವುದನ್ನು ಕಾಣಬಹುದು. ತುರುಗಾಯಿ ರಾಮಣ್ಣನ ವಚನದಿಂದ ಆರಂಭವಾಗುವ ಗಪದ್ಯ ಇಲ್ಲಿದೆ. ಅದಕ್ಕಿಂತ ಮೊದಲು ವಚನ.

> 'ಬಂದಿತ್ತು ದಿನ; ಬಸವಣ್ಣ ಕಲ್ಲಿಗೆ, ಚೆನ್ನಬಸವಣ್ಣನ ಉಳವಿಗೆ
> ಪ್ರಭು ಅಕ್ಕ ಕದಳಿ ದ್ವಾರಕ್ಕೆ
> ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ //

ಅಂದರೆ 12ನೇ ಶತಮಾನದಲ್ಲಿ ಬಸವಣ್ಣನ ಕಲ್ಯಾಣಕ್ಕೆ ಬಂದಿರುವ ಗಂಡಾಂತರವನ್ನು ಹೇಗೆ ಪ್ರತಿಭಟಿಸಿದರು ಎಂಬ ವಾಸ್ತವಾಂಶವನ್ನು ರಾಮಣ್ಣನವರು ಎತ್ತಿ ತೋರಿಸಿದ್ದಾರೆ. ಅದರ ಹಾಗೆ 'ಸಿಂಗಿರಾಜನ ಪುರಾಣ'ದ ಕವಿಯಾದ ಸಿಂಗಿರಾಜ ಈ ಕಾವ್ಯದಲ್ಲಿ ಕಾಲ್ಪನಿಕ ವ್ಯಕ್ತಿಯಾಗಿ ಚಿತ್ರಿತವಾಗಿದ್ದಾನೆ. ಕೆಲವು ಐತಿಹ್ಯಗಳ ಆಧಾರಗಳ ಮೇಲೆ ಸಿಂಗಿರಾಜ ಒಬ್ಬ ಮಾಂಡಲಿಕ ಬಸವಣ್ಣನವರ ಅನುಯಾಯಿ; ಬಿಜ್ಜಳ ಬಸವರ ನಡುವ ವೈಮನಸ್ಸು ಬಂದು ಬಸವಣ್ಣನವರು ಕಲ್ಯಾಣವನ್ನು ತ್ಯಜಿಸಿದಾಗ ಬಿಜ್ಜಳನ ವಿರುದ್ಧ ಸಿಂಗಿರಾಜ ಬಂಡೇಳುತ್ತಾನೆ. ಆಗ ಅವನನ್ನು ಸೆರೆಹಿಡಿಸಿ ತಂದು ಬಿಜ್ಜಳನು ಮರಣ ದಂಡನೆಗೆ ಬಲಿಯಾಗಿಸುತ್ತಾನೆ ಎಂಬ ಅಂಶವನ್ನು ಮನದಲ್ಲಿಟ್ಟುಕೊಂಡು ಶಿವಪ್ರಕಾಶರು 'ಸಿಂಗರಾಜ ಸಂಪಾದನೆ' ಎಂಬ ಗಪದ್ಯವನ್ನು ಬರೆದಿರುವುದು. ಇಲ್ಲಿ ಸಿಂಗಿರಾಜನ ಕೊನೆಯ ದಿನಗಳನ್ನು ಆಧರಿಸಿಕೊಂಡು ಕಥಾಹಂದರದ ರೂಪದಲ್ಲಿ ಈ ಕವಿತೆಯನ್ನು ಕಟ್ಟಿರುವರು. ಅದು ಒಟ್ಟು ಹದಿನೈದು ಸುರುಳಿಗಳಲ್ಲಿ (ಭಾಗ) ರಚಿತವಾದ ಗಪದ್ಯವಾಗಿದೆ. ಇಲ್ಲಿಯ ಪ್ರತಿಭಟನಾತ್ಮಕ ಅಂಶವೆಂದರೆ,

> ನಕ್ಷತ್ರ ಕಾಂತಿಯನ್ನು ಕೊಟ್ಟುವುದು
> ಬಿಜ್ಜಳನ ಕಿರೀಟ
> ಪಂಜುಗಳ ಬೆಳಕಲ್ಲಿ
> ಏನಾಯಿತು
> ನನ್ನ ಜನಗಳೇ
> ನಿಮ್ಮ ಕನಸು ಕಿಟಕಿ ನಕ್ಷತ್ರಗಳನ್ನು
> ತಂದು ಸುರಿಯುತ್ತಿದ್ದೀರಿ
> ನಿಮ್ಮ ಮಕ್ಕಳ ನಾಳೆಗಳನ್ನು
> ತುಳಿವ ಪಾದಗಳ ಮೇಲೆ
> ಮಳೆತರದ ಆ ಮೋಡಗಳು
> ಬಂಡೆಗಳು ಬೀಳುವವು ನಿಮ್ಮ ತಲೆಗಳ ಮೇಲೆ
> ಹೆತ್ತ ಕಂದಮ್ಮಗಳ ಮತ್ತೆ ಬಸಿರೊಳಗಿಟ್ಟರೂ
> ಉಳಿದಾವೆ
> ಅವರ ಹವಳದುಟಿಗಳು..."48"
> (ಸಿಂಗರಾಜ ಸಂಪಾದನೆ – ಮಳೆಬಿದ್ದ ನೆಲದಲ್ಲಿ)

ಎಚ್.ಎಸ್.ಶಿವಪ್ರಕಾಶ ಅವರು ಈ 'ಸಿಂಗರಾಜ ಸಂಪಾದನೆ' ಎಂಬ ಗಪದ್ಯ ಕಾವ್ಯವನ್ನು 16 ಸುರುಳಿಗಳಲ್ಲಿ ರಚಿಸಿದ್ದಾರೆ. ಇದು ಇಲ್ಲಿಯ ಗಪದ್ಯ 4ನೇ ಸುರುಳಿ (ಭಾಗ)ಯಾಗಿದೆ. ಕಲ್ಯಾಣದಲ್ಲಿ ಬಿಜ್ಜಳನ ಅಟ್ಟಹಾಸ, ಕೇಕೆಗಳು, ಕೊಲೆ–ಸುಲಿಗೆ, ಆವಾಂತರಗಳು ಅತಿಯಾದಾಗ ಸಿಂಗರಾಜನು ಅವನ ಕ್ರೌರ್ಯವನ್ನು ಪ್ರತಿಭಟಿಸುವ ಪರಿ ಇದಾಗಿದೆ. ಬಸವಣ್ಣನವರಿಂದ ಪಾವನವಾಗಬೇಕಿದ್ದ ಕಲ್ಯಾಣವು ಇಮದು ಬಿಜ್ಜಳನಿಂದ ಕಂಗೆಟ್ಟು ಹೋಗುತ್ತಿದೆ ಎಂಬ ಆತಂಕದ ಜೊತೆಗೆ ಆಕ್ರೋಶವನ್ನು ಕವಿಗಳು ವ್ಯಕ್ತಪಡಿಸಿದ್ದಾರೆ.

ಬಿಜ್ಜಳನೆಂಬ ರಾಜನು ಇಂದು ಮಿತಿಮೀರಿ ವರ್ತಿಸುವುದರಿಂದ ಅವನ ದರ್ಪ–ದಬ್ಬಾಳಿಕೆಯನ್ನು ಪ್ರತಿಭಟಿಸುವ ಕುರಿತಾಗಿ ಜನರನ್ನು ಎಚ್ಚರಿಸುವ ಸಿಂಗರಾಜನ ಸಾಹಸವು ಒಂದು ಪವಾಡವೆನ್ನುವಂತಿದೆ. ನೆಲಮೂಲ ಸಂಸ್ಕೃತಿಯ ವಾರಸುದಾರರಿಗೆ ಧಕ್ಕೆಯಾಗುತ್ತಿರುವ ಸಂದರ್ಭವನ್ನು ಪ್ರತಿಭಟಿಸುತ್ತಾರೆ. ಬಿಜ್ಜಳನು ತನಗಾಗಿ ತಾನೇ ಹಚ್ಚಿಕೊಂಡ ಬೆಳಕು ಇಂದು ಎಲ್ಲರನ್ನೂ ಅನಾಥರನ್ನಾಗಿಸಿ ಬೀದಿಗೆ ದೂಡುತ್ತಿದೆ. ಮಕ್ಕಳ ಬಗ್ಗೆ ಅಪಾರ ಕನಸುಗಳನ್ನು ಕಟ್ಟಿಕೊಂಡ ಜನರೇ ನಾಳೆ ನಿಮ್ಮ ಮಕ್ಕಳು ನೆಮ್ಮದಿಯಿಂದ ಬದುಕನ್ನು ಸಾಗಿಸಬೇಕೆಂದರೆ ಇಂದೇ ನಾವು ಬಿಜ್ಜಳನಂತಹ ಕ್ರೂರರ ಅಟ್ಟಹಾಸವನ್ನು ಎದುರಿಸಲೇಬೇಕಿದೆ. ಮಳೆಯನ್ನು ತರದ ಈ ಮೋಡಗಳು ನಮ್ಮ–ನಿಮ್ಮಗಳ ತಲೆಯ ಮೇಲೆ ಬಂಡೆಗಳನ್ನು ಸುರಿಯುತ್ತಿವೆ. ಹೆತ್ತ ಮಕ್ಕಳ–ಮರಿಗಳ ಪಾಡೇನು? ಆ ಮಕ್ಕಳ ತುಟಿಯಲ್ಲಿರುವ ಬದುಕಿ ಬಾಳಬೇಕಾದ ಭರವಸೆಗಳಿಗೆ ಬೆಲೆ ಏನು? ಎಂದು ಪ್ರಶ್ನಿಸುತ್ತಾ, ತುಳಿತಕ್ಕೆ ಒಳಗಾದ ಜನರನ್ನು ಒಂದುಗೂಡಿಸಿ ಪ್ರಜ್ಞೆಯನ್ನು ತರುವಂತಹ ಸಿಂಗರಾಜನ ಕಾರ್ಯವು ಶ್ಲಾಘನೀಯವಾಗಿದೆ.

ಮುಂದೆ ಬಸವನೆಂಬ ಭಕ್ತಿಗೆ ಬಿಜ್ಜಳನ ಶಕ್ತಿಯೆಲ್ಲಾ ಹುಡುಗಿಹೋಯಿತು. ಅವನ ಸೈನ್ಯವೆಲ್ಲಾ ಚೆಲ್ಲಾಪಿಲ್ಲಿಯಾಯಿತು. ಪುರೋಹಿತಶಾಹಿಗಳೆಲ್ಲಾ ಜೀವಬಯದಿಂದ ಕಾಲು ಕಿತ್ತರು. ಹೀಗೆ ಕಲ್ಯಾಣದಿಂದ ಕರ್ಹಾಡ ಪ್ರಾಂತ್ಯಕ್ಕೆ ಹರಡಿದ ಬಸವನ ಬೆಳಗು ಎಲ್ಲರನ್ನು ತಿಳಿಗೊಳಿಸಿತು. ನಂತರ ಸಿಂಗರಾಜನನ್ನು ಗಲ್ಲಿಗೇರಿಸುವ ಮೂಲಕ ಸಿಂಗರಾಜ ಒಬ್ಬ ವ್ಯಕ್ತಿ ಅಲ್ಲ. ಸಾಮಾಜಿಕ ಜೀವನದ ಅನುಭವಕ್ಕೆ ಸ್ಪಂದಿಸಿದ ಶಕ್ತಿ ಎಂಬ ಸಂಗತಿಯನ್ನು ಕವಿಗಳು ಸಾರುತ್ತಾರೆ.

> ಉರಿಯುತ್ತಿರು ದೀಪ ಉರಿಯುತ್ತಿರು
> ಹೃದಯಾಂತರಾಳದ ಶಾಂತಿ ಕುಹರಗಳೊಳಗೆ ಬೆಳಗುತ್ತಿರು
> ಮುಳುಗಿ ಮೂಡುವ ಹಗಲ ತೋಳುಗಳಲ್ಲಿ
> ಕಂಗೆಡಿಸುವಂಥ ರೂಪವಿರೂಪ ವಿತಾನ
> ಆ ಚಂದ್ರ ನಕ್ಷತ್ರ ಯಾಕೋ ಉಳಿದಿವೆ ದೂರ
> ಕರೆದರೂ ಕತ್ತಲಿನ ಆರ್ತಗಾನ
> ಕತ್ತಲಲಿ ತೇಲಿಟ್ಟ ಬಯಕೆ ದೀಪಗಳಂಥ
> ನಗರ ವಿದ್ಯುದ್ದೀಪಗಳೂ ಅಂತರ್ಧಾನ

ಆ ಕ್ಷಣಿಕ ಬೆಳಕುಗಳಾಚೆ
ಕತ್ತಲಿನ ಥಳಕುಗಳೀಚೆ
...............................
...............................
...............................
ಎಣ್ಣೆಯಿಲ್ಲದ ಸೊಡಕಿ
ಬಣ್ಣವಿಲ್ಲದ ಬೆಳಕೆ
ಉರಿಯುತ್ತಿರು
ಎಂಥ ಕತ್ತಲಿನಲ್ಲೂ
ಎಂಥ ಬೆಳಕುಗಳಲ್ಲೂ
ಇತ್ತ ಬಾ ಕಂದನೇ
ಎಂದು ನೀರವವಾಗಿ ಕರೆಯುತ್ತಿರು
ಬಿರುಗಾಳಿ ತಂಗಾಳಿ
ಕದನ ಶಾಂತಿಗಳಿರಲಿ
ಕ್ಷಾಮ ಸಂಭ್ರಮವಿರಲಿ
ಎಲ್ಲ ಋತುಗಳಲ್ಲಿ
ಹಗಲಿರಲಿ
ಇರುಳಿರಲಿ
ಎಲ್ಲ ಹೃದಯಗಳಲ್ಲಿ
ದೀಪಗಳ ದೀಪವೇ
ಉರಿಯುತ್ತಿರು. "49"
(ಅಣುಕ್ಷಣ ಚರಿತೆ– ಉರಿಯುತ್ತಿರು ದೀಪ)

ಕಾವ್ಯವು ದುಡಿಯುವ ಜನಗಳ ಪ್ರತಿಧ್ವನಿಯಾಗಿರಬೇಕು. ಶಿವಪ್ರಕಾಶ ಅವರ ನಿರಾಡಂಬರದಿಂದ ಕೂಡಿದ ಅವರ ಕವಿತಾ ರಚನೆಯ ಕಲೆ ಮೆಚ್ಚುವಂತಹದ್ದು. ಶ್ರಮಿಕ ವರ್ಗದ ಪ್ರತಿನಿಧಿಯಾಗಿ ಅವರ ಬಾಳಿಗೆ ಬೆಳಕಾಗಲು ದೀಪವನ್ನು ಸಾಂಕೇತಿಕವಾಗಿ ಬಳಸಿಕೊಂಡಿದ್ದಾರೆ. ದೀಪವು ಸರ್ವರ ಹೃದಯಾಂತರಾಳದಲ್ಲಿ ಶಾಂತಿಯನ್ನು ಬೆಳಗಬೇಕು. ಅದು ಯಾವುದೇ ಮೇಲು ಕೀಳೆಂಬ ಭಾವ ತೋರದೇ ದೀಪ ಬೆಳಗುತ್ತಿದೆ. ಆದರೆ ಇಂದು ಕುಹಕಿಗಳ ಕುತಂತ್ರದಿಂದ ಕಲ್ಮಶಗಳಿಂದ ಕೂಡಿದೆ.
ಪ್ರತಿಯೊಬ್ಬರು ಕತ್ತಲಿನ ಆರ್ತನಾದದಲ್ಲಿ ಬದುಕು ಸವೆಸುವುದಕ್ಕಿಂತ ಬೆಳಕಿನ ಅಲೆಯಲ್ಲಿ ಬದುಕನ್ನು ಕಳೆಯಬೇಕು. ಇಲ್ಲಿ ಸೂರ್ಯ–ಚಂದ್ರರು ಯಾಕೆ ಉಳಿದಿದ್ದಾರೆ ಎಂದರೆ ಕತ್ತಲನ್ನು ಕಳೆದು ಬೆಳಕನ್ನು ಮೂಡಿಸುವ ಸಲುವಾಗಿ. ಅದರಂತೆಯೇ ಮಾನವನ ಬಯಕೆಗಳು ತೇಲಿಬಿಟ್ಟ ದೀಪದಂತಾಗದೇ ಕತ್ತಲಿನೊಡನೆ ಬೆಳಕನ್ನು ಚೆಲ್ಲುವ ಪ್ರತಿಮಾನವಾಗಬೇಕು. ಪ್ರತಿಭಟನೆಯ ಸಂದರ್ಭದಲ್ಲಿ ಯಾರಿಗೆ ಅನ್ನ–ನೀರು, ಅರಿವು–ಅರಿವೆ ಇರುವುದಿಲ್ಲವೋ ಅವರ ಧ್ವನಿಯಾದವರು. ಶಿವಪ್ರಕಾಶರು ಕಾವ್ಯದ ಮೂಲಕ ಪರಿವರ್ತನೆ ತರುವ ಮಹಾದಾಸೆಯನ್ನು ಹೊಂದಿದ್ದ ಇವರು ಕುಹಕಿಗಳನ್ನು ಕಂಡು ಅಣಕವಾಡಿದ್ದಾರೆ. ವಾಸ್ತವತೆಗೆ ಮುಖಮಾಡಿ ಹೋಗುವವರನ್ನು ನಿಂದಕರು ಎಂದಿರುವರು. ಬಯಕೆಗಳು ಎಲ್ಲೋ ದೂರದಲ್ಲಿರುತ್ತವೆ. ಅವುಗಳ ಬೆನ್ನಟ್ಟಿ ಪ್ರಯತ್ನದ ಮೂಲಕ ಪಡೆಯುವುದೇ ಸಾಮಾಜಿಕ ಪ್ರತಿಭಟನೆಯಾಗಿದೆ ಎಂದು ಈ ಕಾವ್ಯದ ಮೂಲಕ ಅವರು ಹೇಳಿದ್ದಾರೆ.
ಮನೆಯಲ್ಲಿ ಬೆಳಗುವ ದೀಪಕ್ಕೆ ಎಣ್ಣೆ, ಬತ್ತಿ, ಪಣತಿಗಳೆಲ್ಲವೂ ಬೇಕು. ಆದರೆ ಪರಿಶುದ್ಧವಾದ ವ್ಯಕ್ತಿತ್ವ ಮತ್ತು ಆದರ್ಶಗಳು ಯಾವಾಗಲೂ ನಿರಂತರವಾಗಿ ಉರಿಯುತ್ತಿರುವ ದೀಪಗಳಿದ್ದಂತೆ. ಹಾಗಾಗಿ ಕವಿಗಳು ನೀರವತೆ (ಮೌನ)ಯನ್ನು ಕಳೆದು ಬಿರುಗಾಳಿ–ತಂಗಾಳಿಗಳ ಕದನದಲ್ಲಿ ಶಾಂತಿಯನ್ನು ಕಾಪಾಡಿ, ಹಗಲಿರುಳು ಶ್ರಮಿಸಬೇಕೆಂಬ ನಿಲುವು ಹೊಂದಿದ್ದಾರೆ.
ಎಚ್.ಎಸ್. ಶಿವಪ್ರಕಾಶ ಅವರ 'ನೀನಿಲ್ಲದಿದ್ದರೆ' ಎಂಬ ಕವನದಲ್ಲಿ ವಾಸ್ತವ ಪ್ರಪಂಚದಲ್ಲಿ ಇಂದು ಎಲ್ಲವೂ ಖಾಸಗಿಕರಣವಾಗಿ, ವಸಾಹತುಶಾಹಿಕರಣ ಪ್ರರಂಭವಾಗುವ ಸಂದರ್ಭವನ್ನು ಪ್ರತಿಭಟಿಸುವ ಕವನ ಹೀಗಿದೆ.

"ನನಗೆ ಗೊತ್ತು–
ಈ ತೋಟಗಳ ಹೂವು
ಮಾರುಕಟ್ಟೆಗಳಲ್ಲಿ ಮಾರಾಟವಾಗುವುದು
ನಿಲ್ಲುವುದಿಲ್ಲ ನೀನಿದ್ದ ಮಾತ್ರಕ್ಕೆ
ಅಥವಾ
ಈ ಚಿಟ್ಟೆಗಳನ್ನು ಸಾವೆಂಬ ಬೆಕ್ಕು
ತಿನ್ನುತ್ತ ಬರುವುದು
ನಿಲ್ಲುವುದಿಲ್ಲ ನೀನಿದ್ದ ಮಾತ್ರಕ್ಕೆ
...............................................
............................................... "50"
(ಅಣುಕ್ಷಣ ಚರಿತೆ – ನೀನಲ್ಲದಿದ್ದರೆ)

ಪ್ರತಿಭಟನೆ ಎಂಬುದು ಕೇವಲ ವಿರೋಧ ಮಾಡುವುದಲ್ಲ ಸರಕಾರದ ಸಾಲ–ಸೌಲಭ್ಯ–ಯೋಜನೆಗಳನ್ನು ಸರ್ವ ಸಾಮಾನ್ಯ ಜನರಿಗೆ ಮುಟ್ಟಿಸಲು ಹೆಣಗಾಡುವುದಾಗಿದೆ. ಶಿವಪ್ರಕಾಶರವರ ಈ ಕಾವ್ಯದ ಆಶಯದಂತೆ, ಮಾರುಕಟ್ಟೆ ಇಂದು ದುಬಾರಿಯಾಗುತ್ತಿದೆ. ಬಡವನಿಗೆ ಗಗನ ಕುಸುಮವಾಗಿ, ಏನೋ ಸ್ವರ್ಗದಂತೆ ಗೋಚರಿಸುತ್ತಿದೆ. ಆಗ ಆತನಿಗೆ ಅದರಲ್ಲಿ ಏನೋ ಇದೆ ಎಂಬ ಕುತೂಹಲ ಮತ್ತು ಭ್ರಮೆ ಒಟ್ಟೊಟ್ಟಿಗೆ ಮೂಡುತ್ತದೆ. ಆದರೆ ಭೂಮಿಯೇ ಸರ್ವಕಾರ್ಯಗಳಿಗೆ ಆಧಾರ. ಆ ಭೂಮಿಯನ್ನೇ ರೈತರು ಮತ್ತು ಕೃಷಿಕಾರ್ಮಿಕರ ಕೆಲಸದಿಂದ ಹದವಾಗಿ ಎಲ್ಲರ ಮುಖದಲ್ಲೂ ಮಂದಹಾಸ ಮೂಡಿಸುತ್ತದೆ. ಇಂದು ಜನಸಾಮಾನ್ಯನಿಗೆ ಆತನೇ ಬೆಳೆದು ತಂದು ಹಾಕಿದ ವಸ್ತುಗಳು ದುಬಾರಿಯಾಗಿ ಮಾರುವಂತಹ ಕಾಲ ಆರಂಭವಾಗಿದೆ. ವಸ್ತುವಿನ ರೂಪದಲ್ಲಿ ಪ್ರತಿಯೊಬ್ಬರಿಗೂ ಆ ವಸ್ತು–ಆಹಾರ ಪದಾರ್ಥಗಳು ಸರ್ವಸಾಮಾನ್ಯವಾಗಿ ಸಿಗಬೇಕೆಂಬುದು ಲೇಖಕರ ಒತ್ತಾಸೆ. ಹೀಗಾಗಿ ನೀನೇ ಬೆಳೆದ ಈ ಫಲ ನಿನ್ನಿಂದಲೇ ದೂರವಾಗುವ ಹಂತಕ್ಕೆ ಬಂದು ತಲುಪಿದೆ ಎಂದು ಲೇಖಕರು ಖಾಸಗೀಕರಣದ ವಿರುದ್ಧ ಗುಡುಗಿದ್ದಾರೆ.
ಎಚ್.ಎಸ್.ಶಿವಪ್ರಕಾಶರವು ಇದೇ 'ಅಣುಕ್ಷಣ ಚರಿತೆ' ಕಾವ್ಯಸಂಕಲನದಲ್ಲಿ ಶ್ರಮಿಕವರ್ಗದ ಶ್ರಮವನ್ನು ದೋಚುತ್ತಿರುವ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಈ ಕಾವ್ಯ ಕಲ್ಲುಗಳು ಎಂಬುದರ ಮೂಲಕ ಅಭಿವ್ಯಕ್ತಿಸಿದ್ದಾರೆ. ಅದೆಂದರೆ,

"ಬಲಿಷ್ಟ ಕೈಗಳಿಂದ
ಸುತ್ತಿ ಏಟುಗಳ ಮೇಲೆ ಏಟುಗಳ ಮೇಲೆ
ಏಟುಗಳ ಸುರಿಮಳೆ
ಭರ್ಜರಿ ಕಲ್ಲುಗಳ ಎದೆ ಮೇಲೆ
ಅದಕ್ಕಾಗಿ, ಪಾಪ, ಅವು ಬಚ್ಚಿಕೂರೋದು
ಭೂಗರ್ಭದಲ್ಲಿ ಬೆಟ್ಟ ಗುಡ್ಡದಲ್ಲಿ
ಸಮುದ್ರ ತಳದಲ್ಲಿ
ನಮ್ಮ ಎದೆಯ ಮೌನದಲ್ಲಿ
ಆದರೆ ಹೀಗೆ ಏಟಿನ ಮೇಲೆ ಏಟು
ರಪರಪ ಬಿದ್ದರೆ ತಾನೆ
ಕಲ್ಲು ಮಿದುವಾಗುವುದು ಹ್ಲದಯದಂತೆ

ಹೃದಯ ಗಡುಸಾಗುವುದು ಕಲ್ಲಿನಂತೆ "[51]"
(ಅಣುಕ್ಷಣ ಚರಿತೆ – ಕಲ್ಲುಗಳು)

ಈ ನಾಡನ್ನು ಕಟ್ಟಿದ ಜನರ ಬದುಕಿನ ಅಸಹಾಯಕತೆಗೆ ಕವಿ ಮಿಡಿದಿದ್ದಾರೆ. ಮತ್ತು ಅವರ ಅಸಹಾಯಕತೆಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದ್ದಾರೆ. ಬಲಿಷ್ಠ ಕೈಗಳಿಂದ ನಿರ್ಮಾಣವಾದ ಜಗತ್ತು ಇಂದು ಅಂತಹ ಜನಗಳನ್ನೇ ಅನ್ನ, ನೀರು, ಅರಿವು, ಅರಿವೆ ಇಲ್ಲದ ಹಾಗೆ ದೂಡಿದೆ. ಶ್ರಮಸಂಸ್ಕೃತಿಯ ಚಿಂತಕರಾದ ಶಿವಪ್ರಕಾಶ ಅವರು ದುಡಿಮೆಯಲ್ಲಿ ದೇವರನ್ನು ಕಂಡ ವರ್ಗದ ಪ್ರತಿನಿಧಿಗಳು. ಆದರೆ ಇಂದು ಜನಸಾಮಾನ್ಯರ ಮೇಲೆಯೇ ಆರ್ಥಿಕ ಏರಿಕೆ, ಬಡತನ, ನಿರುದ್ಯೋಗದಂತಹ ಅಸ್ತ್ರಗಳು ಪ್ರಯೋಗವಾಗಿವೆ. ಇಂದಲ್ಲ ನಾಳೆ ಶ್ರಮಿಕರೇ ಈ ದೇಶದ ವಾರಸುದಾರರಾಗುತ್ತಾರೆ ಎಂಬ ಆಶಯ ಕವಿಯದ್ದಾಗಿದೆ. ಉಳಿಪೆಟ್ಟು ತಿಂದ ಕಲ್ಲು ಶಿಲೆಯಾಗುವಂತೆ, ಅಪಾರ ನಷ್ಟ-ಕಷ್ಟ, ನೋವು-ಹತಾಷೆಗಳನ್ನು ಅನುಭವಿಸಿದ ವರ್ಗವೇ ಹೂವಾಗಿ ಅರಳುವುದು ಎಂದು ಭರವಸೆಯ ಬೆಳಕನ್ನು ಬೀರಿದ್ದಾರೆ.
'ಮಬ್ಬಿನ ಹಾಗೆ ಕಣಿವೆಯಾಸಿ' ಎನ್ನುವ ಕಾವ್ಯ ಸಂಕಲನವು ಶಿವಪ್ರಕಾಶ ಅವರ ಅನುಭವಗಳ, ಅನುಬಂಧಗಳ ಅನುಮಾನಗಳ, ಅನ್ವೇಷಣೆಗಳ, ಅನುಕಂಪಗಳ, ಹೂರಣವಾಗಿದೆ. ಜೀವದ ಆಳಕ್ಕೆ ಹೋಗುವ ಈ ಕೃತಿ ಶಿವಪ್ರಕಾಶರ ತೀಕ್ಷ್ಣ ದೃಷ್ಟಿಯಲ್ಲಿ ಯಾವುದೇ ಸಣ್ಣ ವಿಷಯವೂ ಕವನಕ್ಕೆ ಗಹನವಸ್ತುವಾಗಬಲ್ಲುದೆಂಬ ಸತ್ಯವನ್ನು ತಿಳಿಸಿದ್ದಾರೆ. ಜನಜಂಗುಳಿಯ ಮಧ್ಯೆ, ನಂಟರಿಷ್ಟರ ಮಧ್ಯೆ, ಪ್ರೀತಿಸುವವರ ಮಧ್ಯೆ ಮತ್ತು ಅಭಿಮಾನಿಗಳ ಒಡನಾಟದಲ್ಲಿ ಇವೆಲ್ಲದರ ನಡುವೆ ಕಾಡುವ, ಕಾತರಿಸುವ ಏಕಾಂತತೆ ಶಿವಪ್ರಕಾಶರಿಗೆ ಒಂದು ಅಪ್ಯಾಯಮಾನವಾದ ಭಾವನೆ ನೀಡುತ್ತದೆ. ಮತ್ತು ಅವರು ಅದರ ಬೇರಿನತನಕ ಹೋಗುತ್ತಾರೆ. ಹಿಂದಿನ ದಿನಗಳ, ಹಳೆಯ ಸಂಬಂಧಗಳು, ಒಂದೊಂದು ದಿನದ ಮಾತುಗಳು ಮುರಿದು ಹೋದ ಸ್ನೇಹಗಳು ತಮ್ಮ ನೆರಳನ್ನು ಇಂದಿಗೆ ಮತ್ತು ನಾಳೆಗೆ ಚಾಚುವ ಬಗ್ಗೆ ಈ ಬಂಧಗಳ ಬಾರದ ಬಗ್ಗೆ ಶಿವಪ್ರಕಾಶ ಅವರು ಚಿಂತಿಸಿದ್ದಾರೆ."[52]"
ಮಾನವ ಇಂದು ತನ್ನ ಹೊಟ್ಟೆಪಾಡಿಗಾಗಿ ವ್ಯವಸ್ಥೆಯನ್ನು ತನ್ನ ಪರವಾಗಿ ತಿರುಚಿಕೊಂಡು ಸಾಮಾನ್ಯರ ಮೇಲೆ ಶೋಷಿತ-ದಬ್ಬಾಳಿಕೆಯನ್ನು ಮಾಡುತ್ತಿದ್ದಾನೆ. ಅಂತಹ ವ್ಯಕ್ತಿಗಳ ಪ್ರತಿರೋಧವನ್ನು ಒಡ್ಡುವ ಕುರಿತಾಗಿ ಕವಿಗಳ ಈ ಕವನ ರಚಿಸಿದ್ದಾರೆ. ಅದೆಂದರೆ,

"ಮದುವೆ ತಿಥಿಗಳೆಲ್ಲವೂ
ಮುಗಿದು ಹೋಗಿವೆ.
ಧರೆಯಗಲ ಬಲೆ
ಈಗ ಆರಿ ಹೋಗಿದೆ
ಕೋಟಿ ಕೋಟಿ ಹೊಟ್ಟೆಗಳಿಗಾಗಿ
ಹಿಟ್ಟು ಬೇಯಿಸಲೆಂದು
ಸುಟ್ಟು ಹಾಕಿದ ಕಾಡು
ಉತ್ತರ ಧೃವದಿಂದ ದಕ್ಷಿಣ ಧೃವದನಕ ಹಬ್ಬಿದ
ಹಚ್ಚನೆಯ ಕಾಡು
ಈಗ ಉರಿದು ಬೂದಿಯಾಗಿದೆ
ನೀವೇ ಮುಟ್ಟಿ ನೋಡಿ
ಎಷ್ಟು ತಣ್ಣಗಾಗಿದೆ
ಕಾಡನುಂಗಿದ ಕಿಚ್ಚು
ನಾಡೊಳಗೂ ಉರಿದು
ನಾಡಿಗರ ಕಥೆಯೂ ಮುಗಿದು ಹೋಗಿದೆ
ಆ ವಿನಾಶದ ವಿಚಿತ್ರ ವಿಕೃತ ಚಿತ್ರಗಳನ್ನು
ನಾನೊಬ್ಬನೇ ಬಿಡಿಸುತ್ತಿರುವಾಗ
ಆ ಬೂದಿಯ ವಿಶಾಲ ಮರಡಿನಲ್ಲಿ
ಇಗೊ
ಸೂರ್ಯ!
ಆ ಬೃಹತ್ ಬಸಿರೊಳಗಳೊಳಗಲ
ಹೊಸಾ ಭ್ರೂಣ "[53]"
(ಮಬ್ಬಿನ ಹಾಗೆ ಕಣಿವೆಯಾಸಿ– ಒಲೆ)

ಶಿವಪ್ರಕಾಶ ಅವರು ಈ ಮೇಲಿನ ಕವನದಲ್ಲಿ ಪ್ರತಿಭಟನಾತ್ಮಕ ವಿರೋಧಿಗಳು ಏನೆಂದರೆ ಇಂದು ಮದುವೆ ಮಂಟಪ ಇನ್ನಿತರ ಕಾರ್ಯಗಳ ನೇಮದಲ್ಲಿ ಭೂಮಿಯಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಹಾಳು ಮಾಡುತ್ತಿದ್ದಾನೆ. ಭೂಮಿಯ ತುಂಬೆಲ್ಲಾ ವಿಸ್ತರಿಸಿ ಮಾನವೀಯತೆಯನ್ನೇ ಸುಟ್ಟು ಹಾಳುಮಾಡುವ ತಂತ್ರಗಾರಿಕೆಯ ವಿರುದ್ಧ ಪ್ರತಿಭಟಿಸಿದ್ದಾರೆ. ಭೂಮಿಯ ಮೇಲೆ ವಾಸಮಾಡುತ್ತಿರುವ ಕೋಟಿಕೋಟಿ ಜನರು ಹೊಟ್ಟೆಗೆ ಹಿಟ್ಟಿಲ್ಲದೇ ಬದುಕು ದೂಡುತ್ತಿದ್ದಾರೆ. ಆದರೆ ಉಳ್ಳವರು ಮನೆಯೊಳಗೆ, ಮನೆಯ ಮೇಲೆ, ಹೊರಗೆಲ್ಲಾ ದೀಪವನ್ನು ಹಚ್ಚಿಕೊಂಡು ಸಂಸ್ಕೃತಿಯೆಂಬ ಶ್ರೀಮಂತಿಕೆಯ ಅಹಂನಲ್ಲಿ ಮೆರೆಯುತ್ತಿದ್ದಾರೆ. ಅದಕ್ಕಾಗಿ ಮನುಷ್ಯನು ಹೊಟ್ಟೆ, ಬಟ್ಟೆಯನ್ನು ಹೊರೆದುಕೊಳ್ಳಲು ಕಾಡು-ಮೇಡು ಅಲೆದಾಡಿ ನಿಸ್ಸಹಾಯಕನಾಗಿದ್ದಾನೆ. ಅವನ ಅಂತಃಸತ್ವದ ಅರಿವನ್ನೇ ಕೆದಕುವ ಪ್ರಯತ್ನ ಇಲ್ಲಿ ಮಾಡಲಾಗಿದೆ.
ಉತ್ತರದಿಂದ ದಕ್ಷಿಣದವರೆಗೆ ಹಬ್ಬಿದ ಕಾಡು ಪ್ರದೇಶ ಇಂದು ಸರ್ವನಾಶವಾಗಿ ವ್ಯಾಪಾರದ ಸರಕಾಗಿ ಮಾರಾಟವಾಗುತ್ತಿದೆ. ಇದೆಲ್ಲಾ ಭೂಮಿಯ ಮೇಲೆ ವಾಸಮಾಡುವ ಪ್ರತಿಯೊಂದು ಜೀವಿಯು ಅಸಹಾಯಕತೆಯಿಂದ ಬದುಕನ್ನು ಸಾಗುತ್ತಿಸುತ್ತಿವೆ. ಕಾಡನ್ನೇ ನುಂಗಿ ಹಾಕುತ್ತಿರುವ ಬೆಂಕಿ ಇಂದು ಕಾಳ್ಗಿಚ್ಚಿನಂತೆ ಹಬ್ಬಿ, ಇಡೀ ವ್ಯವಸ್ಥೆಯನ್ನೇ ನುಂಗಿ ಹಾಕುತ್ತಿದೆ. ನಾಡೊಳಗಿರುವ ಪರಿಸ್ಥಿತಿಯೂ ಬೇರೆಯಲ್ಲ ಎಂಬ ಸತ್ಯವನ್ನು ಹೇಳಿದ್ದಾರೆ. ಇಲ್ಲಿ ಪ್ರತಿಯೊಬ್ಬರೂ ಕೂಡ ನಾಡು ಮತ್ತು ಕಾಡಿನ ವಾರಸುದಾರರೇ. ಅಂತಹ ನಾಡು ಮತ್ತು ಕಾಡನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ವ್ಯವಸ್ಥೆಯನ್ನು ಹಾಳು ಮಾಡುತ್ತಿರುವ ವರ್ಗದ ವಿರುದ್ಧ ಧ್ವನಿಯೆತ್ತಿದ್ದಾರೆ.
ಚರಿತ್ರೆಗಳು ವಾಸ್ತವತೆಯನ್ನು ತಿಳಿಸುವ ಮೂಕ ಸಾಕ್ಷಿಗಳಿದ್ದಂತೆ. ನಮ್ಮ ಹಿಂದಿನ ಹಿರಿಕರ ಪಳಿಯುಳಿಕೆಗಳು ಅಂತರಂಗದ ಅರಿವಿನ ಬೆಳಕಾಗಿದ್ದವು. ಅವುಗಳು ಇಂದು ಏನಾಗಿವೆ? ಅವುಗಳನ್ನು ಹಾಳುಮಾಡುತ್ತಿರುವ ವ್ಯವಸ್ಥೆಯ ವಿರುದ್ಧ ಶಿವಪ್ರಕಾಶ ಅವರು ರಚಿಸಿದ ಕವಿತೆ ಹೀಗಿದೆ.

"ಯಾಕೆ ನಮ್ಮ ಹಿರೇಕರು
ಹೀಗೆ
ಶಿಲಾಶಾಸನಗಳ ಮೇಲೆ
ತಾಳೆಯೆಲೆಗಳ ಮೇಲೆ
ಕಿತ್ತಾಳೆ-ಕಂಚು-ತಾಮ್ರಗಳ ತಟ್ಟೆ, ಪಾತ್ರೆಗಳ
ಅರಮನೆ, ದೇವರಗುಡಿಗಳ ಭಿತ್ತಿಗಳ ಮೇಲೆ
ಅಚ್ಚು ಹಾಕಿಸಿದ ಪುಟಗಳ ಮೇಲೆ
ಇತ್ತೀಚಿಗೆ ಅಂತರ್ಜಾಲದ ಮೇಲೆ
ಬಿಟ್ಟು ಹೋಗಿದ್ದಾರೆ.
ಇಷ್ಟೊಂದು ವಿಜಯಗಳ ದಾಖಲೆಗಳನ್ನು?
ಕಟ್ಟಿಗೆ ಕಟ್ಟಿದಂತಿವೆ ಅವೆಲ್ಲವೂ;
ಹರಿದ ಮುಕುಟಧಾರಿ ಶಿರಸ್ಸುಗಳು;

ಕರಕಾಗುವವರೆಗೆ ಸುಟ್ಟ ರಾಸುಗಳು, ಕುದುರೆಗಳು
ನಂಜು ಬೆರೆಸಿದ ಕೆರೆ–ಬಾವಿ–ನದಿಗಳು
ಕುಸಿದು ಬಿದ್ದ ಕೋಟೆ–ಕೊತ್ತಳಗಳು
ಅಪವಿತ್ರವಾದ ವಿಗ್ರಹಗಳು;
ಕೆಳಗುರುಳಿದ ಇಮಾರತಿಗಳು...................
ಹೀಗೆ ವಿನಾಶಗೊಂಡ ಯಾವುದೇ ಮಹಾನಗರದಿಂದ
ಪಲಾಯನ ಬಂದ ಅಸಂಖ್ಯೆ ನಿರಾಶ್ರಿತರಲ್ಲೊಬ್ಬ ನಾನೂ
ಗುಳೆ ಹೊರಟಿದ್ದೇನೆ. ಅವರೆಲ್ಲರ ಜೊತೆ
ಜಯಾಪಜಗಳಾಚೆಗಿನ ಇನ್ನೊಂದು ನಗರವನ್ನರಸುತ್ತಾ
ಹತ್ಯೆಗಳ ತಳಾದಿಯಿಲ್ಲದ ಇನ್ನೊಂದು ನಾಡನರಸುತ್ತಾ
ನಡುವೆ ನೀನು ಬಂದೆ
ಗೊತ್ತಿಲ್ಲ ಸೂರ್ಯನಿಂದಲೋ ಚಂದ್ರನಿಂದಲೋ
ಯೋಗಿಗಳ ಮನದಾಳದ ದಿವ್ಯಜ್ಯೋತಿಯಿಂದಲೇ
ನಾನು ಶರಣಾದೆ ನಿನ್ನ ಕಂಗಳ ಶಾಂತ ಬೆಳಕಿಗೆ
ಅಂದಿಂದ ನಾನು ಅಳಿಸಿ ಹಾಕುತ್ತಿದ್ದೇನೆ
ವಿಷಯಗಳನೇತಿಹಾಸವನ್ನು
ರಚಿಸುತ್ತಿದ್ದೇನೆ
ಸ್ವತಂತ್ರೇಚ್ಛೆಯ ಶರಣಾಗತಿಯ ಇತಿಹಾಸವನ್ನು"[54]
(ಮಾತು ಮಂತ್ರವಾಗುವವರೆಗೆ – ಒಲೆ)

ಸಮಾಜದ ಜೀವಂತಿಕೆ ಮತ್ತು ಚರಿತ್ರೆಗಳು ನಿಂತಿರುವುದು ಪುರಾತತ್ವ ಮತ್ತು ಸಾಹಿತ್ಯಿಕ ಆಧಾರಗಳ ಮೇಲೆ. ಆದರೆ ಶಿವಪ್ರಕಾಶ ಅವರ ನಿಲುವೇನೆಂದರೆ ನಮ್ಮ ಚರಿತ್ರೆ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತಿರುವ ಚರಿತ್ರೆ ಹಾಳಾಗುವುದರ ಬಗ್ಗೆ ಅವರು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಪುರಾತನರು ಕಟ್ಟಿ ಬೆಳೆಸಿದ ಚರಿತ್ರೆಯನ್ನು ಇಂದು ಜಾತಿ–ಮತ–ಧರ್ಮ–ಪಕ್ಷಗಳ ರೂಪದಲ್ಲಿ ಒಡೆದು ಹಾಳುಗುತ್ತಿವೆ. ಧರ್ಮದ ಹೆಸರಿನಲ್ಲಿ ಅರಾಜಕತೆ ಸೃಷ್ಟಿಯಾಗಿ ಜನಮನವನ್ನು ಇಂದು ತಲ್ಲಣಿಸುತ್ತಿದೆ. ಅದರ ವಿರುದ್ಧವಾದ ನಿಲುವುಗಳನ್ನು ಕವಿಗಳು ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಚರಿತ್ರೆಯನ್ನು ನಾಶ ಮಾಡಬಾರದು. ಉಳಿಸಿ ಬೆಳೆಸಬೇಕೆಂಬ ನಿಲುವಿನಲ್ಲಿ ನಮ್ಮ ಹಿರಿಯರು ಶಿಲಾಶಾಸನ, ತಾಳೆಎಲೆ, ಕಂಚು–ತಾಮ್ರ, ತಟ್ಟೆ, ಪಾತ್ರೆ, ಅರಮನೆ ದೇವಸ್ಥಾನಗಳ ಮುಂದೆ ಅಂಟಿಸಿದ ಬಿತ್ತಿ ಪತ್ರಗಳ ಮೇಲೆ ಅಚ್ಚು ಹಾಕಿಸುತ್ತಿದ್ದರು. ಆದರೆ ಇಂದಿನ ದಿನಮಾನಗಳಲ್ಲಿ ಅಂತರ್ಜಾಲದ ಮುಖಾಂತರ ನಮ್ಮ ಪಳಿಯುಳಿಕೆ ನಿಂತಿದೆ. ಆದರೆ ಅದು ಜಡತ್ವವನ್ನು ಹೊಂದಿದೆ ಎಂಬ ಆತಂಕದ ಜೊತೆಗೆ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೇ ಜನರ ಜೀವನಾಡಿಯಾದ ಕೆರೆ–ಹಳ್ಳ, ಬಾವಿಗಳ ನಂಜಾಗಿ ಕೊಲ್ಲುತ್ತಿವೆ. ಹಿರಿಯರು ಕಟ್ಟಿದ ಕೋಟೆ ಕೊತ್ತಲುಗಳು ಕುಸಿದು ಬಿದ್ದು ಹಾಳಾಗಿ ಹೋಗಿವೆ. ಎಲ್ಲಿಂದಲೋ ಬಂದವರು ನಮ್ಮವರನ್ನು ಗುಲಾಮರನ್ನಾಗಿಸಿಕೊಂಡು ಆಳುತ್ತಿದ್ದಾರೆ. ನಾವುಗಳು ಇಂದು ಜಯಾಪಜಯಗಳ ನಡುವೆ ಪಲಾಯನ ಕಾರ್ಯವು ನಗರವನ್ನರಸಿ ಹೊರಟಿದೆ ಎಂಬ ಆತಂಕವೂ ಇಲ್ಲಿದೆ. ಸೂರ್ಯ ಚಂದ್ರರಿರುವವರೆಗೂ ಪ್ರಕಾಶಿಸಬೇಕಿದ್ದ ಚರಿತ್ರೆಯು ನಸುಕಿನಂತೆ ಕತ್ತಲಲ್ಲಿ ಮಾಯವಾಗಿ ಕರಗಿ ಹೋಗುತ್ತಿದೆ. ಆ ನಿಟ್ಟಿನಲ್ಲಿ ನಾವುಗಳು ಕಾರ್ಯಪ್ರವೃತ್ತರಾಗಿ ಸಂಸ್ಕೃತಿ, ಚರಿತ್ರೆಯ ಭಂಜಕರನ್ನು ಒದ್ದೋಡಿಸಬೇಕಿದೆ ಎಂಬ ನಿಲುವನ್ನು ಕವಿಗಳು ಹೊಂದಿದ್ದಾರೆ. ವಾಸ್ತವ ಬದುಕೇ ಚರಿತ್ರೆಯನ್ನು ಎತ್ತಿ ಹೇಳುತ್ತದೆ ಎನ್ನುವ ಅಭಿಪ್ರಾಯಕ್ಕೆ ಕವಿಗಳು ಬಂದಿದ್ದಾರೆ.

ಸ್ವಾಭಿಮಾನಿ ಸೇನಾನಿಗಳ ಶಕ್ತಿಯನ್ನು ಶಿವಪ್ರಕಾಶ ಅವರು 'ನಿವೃತ್ತಿ ಪತ್ರ' ಎಂಬ ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ಕಿತ್ತೂರಿನ ರಕ್ಷಣೆಗಾಗಿ ಹೋರಾಡಿದವರ ಕಥೆಯನ್ನು ಹಾಗೂ ಅವರು ಬ್ರಿಟಿಷರ ವಿರುದ್ಧ ಹೂಡಿದ ದಂಗೆಯ ಕುರಿತಾಗಿ ವಿವರಿಸಿದ್ದಾರೆ. ಅದೆಂದರೆ,

"ಕಿತ್ತೂರು ಸಂಸ್ಥಾನದ ಕೊನೆಯ ದಿನಗಳು
ಅಪ್ಪ ಸತ್ತು ಅಂದುಕೊಂಡದ್ದಕ್ಕಿಂತಾ ಮೊದಲು
ಗಾದಿ ಹತ್ತಿರ ಮತ್ತಿನಲ್ಲಿ
ಆ ಕುರುಡು, ಹಾದರಬುಡಕ, ಪಡ್ಡೆರಾಜ ಶಿವಲಿಂಗ ಸರ್ಜ
ಕಿತ್ತೂರಿನ ಅರಮನೆಯ ಕೊಟ್ಟಿಗೆಯ ಗೋವುಗಳ ಮಧ್ಯೆ
ರುದ್ರಮ್ಮ ಚನ್ನಮ್ಮ ಮೊದಲಾದ ರಾಣಿಯರ ಮಧ್ಯೆ
ತನಗಿನ್ನಾ ಚನ್ನಾಗಿ ಚಿನ್ನಾಟವಾಡಿ ಬೆಳೆದಿದ್ದ
ಸಾಕುತಮ್ಮ ಮಡಿವಾಳನನ್ನು
ಗಡಿಪಾರು ಮಾಡು ಹೊರಗಟ್ಟಿದ್ದ
ತಾಯಿಯರು ಬೇಡ ಬೇಡ ಎಂದು ಬೇಡಿಕೊಂಡರೂ ಕೂಡ
ಹಡಕ ಹಡಕ ಎಂದು ವಿನಾಕಾರಣ ಅನಿಸಿಕೊಂಡ
ಸಿಡುಕಿನ ಕ್ಷಣದಲ್ಲಿ
ಶಿವಯೋಗಿ ಮಡಿವಾಳ
ಆ ರಾಜ, ಆ ರಾಜ್ಯ, ಅವನ ವಂಶ
ಎಲ್ಲವನ್ನೂ ಬಾಯ್ತುಂಬ ಶಪಿಸಿದ್ದ
ಆದರೆ
ಕಂಪನಿ ಸರ್ಕಾರದ ಮದರಾಸು ಕಛೇರಿಯಲ್ಲಿ
ತಾನು, ತನ್ನ ವಂಶ, ಎಲ್ಲ
ರಾಜವಂಶಗಳ ನಿವೃತ್ತಿ ಪತ್ರದ ಕರಡು
ಈಗಾಗಲೇ ತಯಾರಾಗುತ್ತಿದ್ದ ವಿಷಯ
ಹೇಗೆ ಗೊತ್ತಾಗಬೇಕು
ಮದದಿಂದ ಗುಹ್ಯ ರೋಗಗಳಿಗೆ ಬಲಿಯಾಗುತ್ತಿದ್ದ
ಶಿವಲಿಂಗ ಸರ್ಜನಿಗೆ
ಬೆಳಗು ಬೈಗುಗಳಲ್ಲಿ ಬೆಳಕನ್ನೇ ನಿಟ್ಟಿಸುತ್ತಾ
ಕುರುಡಾಗುತ್ತಿದ್ದ
ಶಿವಯೋಗಿ ಮಡಿವಾಳನಿಗೆ"[55]
(ಅಣುಕ್ಷಣ ಚರಿತೆ–ನಿವೃತ್ತಿ ಪತ್ರ)

ಎಚ್.ಎಸ್.ಶಿವಪ್ರಕಾಶ ಅವರ ಪ್ರತಿಭೆ ಅಲ್ಲಮರು ಹೇಳುವಂತೆ ಅಯುಷ್ಯವೂ ಹಿರಿದು, ಭಾಷೆ ಕಿರಿದು ಎಂಬಂತಿದೆ. ಇಲ್ಲಿಯ ಕಾವ್ಯಗಳಲ್ಲಿ ಮೂಡಿದ ತಲ್ಲಣಗಳು, ಕಂಪನಗಳು ಸಹೃದಯ ಓದುಗರಲ್ಲಿ ಸ್ಪಂದನವನ್ನು ಉಂಟು ಮಾಡುತ್ತವೆ. ಆ ಸ್ಪಂದನಗಳ ಉಂಟಾಗಿ ಅವರಲ್ಲಿ ಭಾವಸಂದದ ಅರಿವು ಸ್ವಲ್ಪವಾದರೂ ಜಾಗೃತವಾದರೆ, ಕಳೆದ ಏಳು–ಬೀಳು ವರ್ಷಗಳ ಪರಿಪಾಟಲುಗಳು ದೂರವಾಗುತ್ತವೆ ಎಂಬ ಆಶಯಗಳು ಈ ಕವಿತೆಯಲ್ಲಿದೆ. ಕಿತ್ತೂರಿನಲ್ಲಿನ ಬ್ರಿಟಿಷರೊಂದಿಗಿನ ಕದನದ ಕೊನೆಯ ದಿನಗಳ ಕುರಿತಾಗಿ ಕವಿಗಳು ಈ ಕಾವ್ಯದಲ್ಲಿ ಕಂಡರಿಸಿದ್ದಾರೆ. ಒಂದು ಅಧಿಕಾರ, ಅಂತಸ್ತು ಮತ್ತು ಸಂಪತ್ತು ಎಂಬುದು ಮತ್ತಿನಲ್ಲಿದ್ದವರನ್ನು ಎಚ್ಚರಿಸುತ್ತದೆ. ಹಾಗೂ ಎಚ್ಚರದಲ್ಲಿದ್ದವರನ್ನು ಮತ್ತಿನಲ್ಲಿರುವಂತೆ ಮಾಡುತ್ತದೆ.

ಕಿತ್ತೂರಿನ ಅಧಿಪತಿಗಳು ನಾಡ ಪ್ರೇಮಿಗಳಾಗಿದ್ದ ಚೆನ್ನಮ್ಮ, ರುದ್ರಮ್ಮ ಮೊದಲಾದವರ ನಡುವೆ ಗೋವುಗಳ ಮಧ್ಯೆ ನಡೆಯುತ್ತಿದ್ದ ಸಂಭಾಷಣೆಯನ್ನು ಕವಿಗಳು ಕಾವ್ಯರೂಪದಲ್ಲಿ ಹೊರತಂದಿದ್ದಾರೆ. ಅದರಲ್ಲಿ ಸಾಕು ತಮ್ಮನಾಗಿದ್ದ ಮಡಿವಾಳನನ್ನು ಅವರ ತಾಯಿ ಬೇಡ ಬೇಡವೆಂದರೂ ಕೂಡ, ಆತನನ್ನು ಕೈಲಾಗದವನು ಎಂದುಕೊಂಡು ಗಡಿಪಾರು ಮಾಡಿದ್ದರು. ಅವರಸರದಲ್ಲಿ ಶಿವಯೋಗಿ ಮಡಿವಾಳ ಆ ರಾಜ ಆ ರಾಜ್ಯ ಅವನ ವಂಶ ಎಲ್ಲ ರಾಜವಂಶಗಳ ನಿವೃತ್ತಿ ಪತ್ರದ ಕರಡನ್ನು ಸಿದ್ದಪಡಿಸಲಾಗುತ್ತದೆ.

ಅದರಲ್ಲಿ ಶಿವಲಿಂಗಸರ್ಜನು ತನ್ನ ಮದದಿಂದ ಮಾರಣಾಂತಿಕ ಖಾಯಿಲೆಗೆ ಬಲಿಯಾಗುತ್ತಿದ್ದ ಮತ್ತು ಬಯಲಿನ ಬೆಳಕನ್ನೇ ಕಾಣಲಾಗದೇ ಒದ್ದಾಡುತ್ತಿದ್ದ ಶಿವಯೋಗಿ ಮಡಿವಾಳನಿಗೆ ಈ ನಿವೃತ್ತಿ ಪತ್ರ ಬಂದಿತು. ಅಂದರೆ ದೇಶದ ರಕ್ಷಣೆ ಮತ್ತು ಸ್ವಾಭಿಮಾನದ ಪ್ರಶ್ನೆಗೆ ಧಕ್ಕೆ ಬಂದಾಗ ನಮ್ಮ ಪ್ರಾಣವನ್ನಾದರೂ ಒತ್ತೆಯಿಟ್ಟು ಜಾತ್ಯಾತೀತ, ಸಮತಾವಾದದ ನಾಡನ್ನು ಉಳಿಸಿಕೊಳ್ಳಬೇಕೆಂಬ ನಿಲುವು ಈ ಕಾವ್ಯದಲ್ಲಿದೆ. ಅಲ್ಲದೇ ನಾಡಜನತೆಗೆ ದ್ರೋಹ ಬಗೆಯುವ ಯಾವುದೇ ಶಕ್ತಿಗಳಿರಲಿ ಅವರ ಶಕ್ತಿಯನ್ನು ಹುಟ್ಟಡಗಿಸುವ ಮೂಲಕ ಚಾರಿತ್ರ್ಯವನ್ನು ಮತ್ತು ಪ್ರಾದೇಶಿಕ ಸಂಸ್ಕೃತಿಯನ್ನು ಮೆರೆಯಬೇಕು ಎಂದು ಕವಿಗಳು ಈ ಕವಿತೆಯಲ್ಲಿ ಪ್ರಸ್ತಾಪಿಸಿದ್ದಾರೆ.

ಎಚ್.ಎಸ್.ಶಿವಪ್ರಕಾಶರವರು 'ಐದು ಬಣ್ಣದ ಹುಲಿ' ಎಂಬ ಕವಿತೆಯಲ್ಲಿ ಕನಸುಗುಣಿಯಾಗಿ ಜನರ ರಕ್ತವನ್ನು ಹೀರುತ್ತಿರುವ ಪಿಶಾಚಿಯ ಕುರಿತಾದ ಸಂಗತಿಯನ್ನು ಚಿತ್ರಿಸಿದ್ದಾರೆ. ಆ ಕವನ ಹೀಗಿದೆ.

"ಅಯ್ಯೋ, ಅಮ್ಮಾ!
ಐದು ಬಣ್ಣದ ಹುಲಿರಾಯ ಏಕದಂ
ಬಾಯಿ ಹಾಕಿ ಸೀದಾ ನನ್ನ ತೋಳಿಗೇ
ಸೊರಸೊರ ರಕ್ತ ಹೀರತೊಡಗಿತು;
ಮೂಳೆಗಳ ಸೀಪತೊಡಗಿತು....
ಭೀತಿ, ನೋವು ಏನೂ ಗೊತ್ತಾಗದೆ
ಆ ಭೀತಿಯಲ್ಲಿ, ಆ ನೋವಿನಲ್ಲಿ
ಸತ್ತವನಂತೆ ನಾನು ಮಲಗಿದ್ದಾಗ.
ಚಪ್ಪಾಳೆ
ಸದ್ದು! ಎಚ್ಚರಾಯಿತು.
ಕಣ್ ಬಿಟ್ಟು ನೋಡಿದೆ;
ನಿನ್ನ ರಕ್ತಸಿಕ್ತ ಕೈಯಿ,
ಮುಗುಳ್ನಕ್ಕು ನೀನೆಂದೆ;
ಸೊಳ್ಳೆ ನಿನ್ನ ತಿಂದೇ ಬಿಟ್ಟಿತ್ತು
ಹುಲಿ, ಸೊಳ್ಳೆ...
ನಮ್ಮ ವಂಶೀಕರೇ ಅಚಿತ ನೆನಪಾಯಿತು"[56]

ಕವಿಗಳು ರಚಿಸಿದ ಹಲವಾರು ಕಾವ್ಯಗಳಲ್ಲಿ ಅತ್ಯಂತ ವಿಶಿಷ್ಟವಾದ ಕವಿತೆಯಾಗಿದೆ. ಸಮಾಜವನ್ನು ಕಿತ್ತು ತಿನ್ನುತ್ತಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಳುವ ವರ್ಗಗಳ ಕ್ರೌರ್ಯವು ಅಗಾಧವಾದುದಾಗಿದೆ. ಶ್ರಮಿಕರ ಶ್ರಮ ಮತ್ತು ಜನಸಾಮಾನ್ಯರ ಶಕ್ತಿಯನ್ನು ವಸಾಹತುಶಾಹಿಗಳು ಇಂದು ದೋಚಿ ಮಾಯವಾಗುತ್ತಿದ್ದಾರೆ. ಇಂತಹ ಮಾಯಾ ಪ್ರಪಂಚದಿಂದ ನಾವು ಎಚ್ಚರಗೊಂಡು, ಅಸ್ತಿತ್ವದ ಹುಡುಕಾಟದ ಹಂತಕ್ಕೆ ತಲುಪಬೇಕಿದೆ. ಆಧುನಿಕರಣದ ಭರಾಟೆಯಲ್ಲಿ ಮಾರಾಟವಾಗುವ ಸರಕಿನಂತೆ ನಮ್ಮ ಶ್ರಮ ಮರಾಟವಾಗುತ್ತಿದೆ. ಅಂತಹ ದುಷ್ಟಶಕ್ತಿಗಳ ವಿರುದ್ಧ ಪ್ರತಿಭಟಿಸಬೇಕೆಂಬ ಧೋರಣೆ ಈ ಕಾವ್ಯದ ಆಶಯವಾಗಿದೆ. ಪ್ರತಿಯೊಬ್ಬರ ಜೀವನ ಇಂದು ಕನಸಿನಂತೆ ಕಂಗೊಳಿಸುತ್ತದೆ. ಆದರೆ ಎಚ್ಚರಗೊಂಡಾಗ ಇರುವ ಯಥಾಸ್ಥಿತಿಯನ್ನು ಕಂಡು ಭಯಭೀತರಾಗುವ ಜೊತೆಗೆ ಅಸಹ್ಯವೆನಿಸುತ್ತದೆ.

ಐದು ಬಣ್ಣದ ಹುಲಿ ಎಂದರೆ ದುಡಿವ ವರ್ಗದ ಕನಸನ್ನು ಕಿತ್ತು ತಿನ್ನುತ್ತರುವ ಆಳುವ ವರ್ಗ, ಜಮೀನ್ದಾರಿ ವ್ಯವಸ್ಥೆ, ಬಂಡವಾಳ ಶಾಹಿಗಳು, ಕಾರ್ಪೋರೇಟ್ ವಲಯಗಳು ಮತ್ತು ಉದ್ಯಮಿಗಳು. ಇವರು ಇಡೀ ದೇಶವನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಜನಸಾಮಾನ್ಯರ ಜೀವನದ ಜೊತೆಗೆ ಚೆಲ್ಲಾಟವಾಡುತ್ತಿದ್ದಾರೆ. ಈ ವ್ಯವಸ್ಥೆಯಲ್ಲಿ ಅಡಿಯಾಳಾಗಿ ಬದುಕುತ್ತಿರುವ ವರ್ಗವು ನಿರಾಶದಾಯಕವಾಗಿದೆ. ಹೀಗಾಗಿ ಆಳುವ ವರ್ಗದ ವಿರುದ್ಧ ಪ್ರತಿಭಟಿಸುವ ಈ ಕವಿತೆಯು ಮುಖಮಾಡಿ ನಿಲ್ಲುತ್ತದೆ. ನರಭಕ್ಷಕನಂತೆ ಈ ವರ್ಗದ ಕಿತ್ತು ತಿನ್ನುತ್ತಿರುವಾಗ ರಕ್ತದ ಕೋಡಿಯು ಹಳ್ಳಗಳಾಗಿ ಹರಿಯುತ್ತಿದೆ. ಮಾಂಸವನ್ನು ತಿಂದು ಅವರ ಮೂಳೆಗಳನ್ನು ಸೀಪತೊಡಗಿದೆ. ಹೀಗಾಗಿ ಸಮಾಜದಲ್ಲಿ ಬದುಕುವ ಪ್ರತಿಯೊಬ್ಬರಿಗೂ ಇಂದು ನೋವಿನಲ್ಲ ಬೀತಿ ಎದ್ದು ಕಾಣುತ್ತದೆ. ನನ್ನ ಪಾಡಿಗೆ ನಾನಿದ್ದರೆ ಸುತ್ತಮುತ್ತಲಿನ ಜನರು ಚಪ್ಪಾಳೆ ಹೊಡೆದು ಎಚ್ಚರಗೊಳಿಸುತ್ತಿದ್ದಾರೆ. ವಾಸ್ತವ ಅರಿವೆಗೆ ಬಂದಾಗ ಮೂಕ ಪ್ರೇಕ್ಷಕನಂತೆ ಆದೇ ಎಂಬ ಕನಸಿನ ಮಾತಿನೊಂದಿಗೆ ಮುಕ್ತಾಯಗೊಳಿಸುತ್ತಾರೆ. ಮುಗಿಯುವ ಹಂತದಲ್ಲಿದ್ದಾಗ ನನಗೆ ತೊಂದರೆ ಕೊಟ್ಟವರು ಯಾರೆಂದು ಕ್ಷಣ್ಣಾಡಿಸಿ ನೋಡಿದಾಗ ಹುಲಿಯೂ ಅಲ್ಲ. ಸೊಳ್ಳೆಯು ಅಲ್ಲ, ನಮ್ಮವರೆ ನಮಗೆ ಹಿತಶತ್ರುಗಳಾಗಿ ಕಾಡುತ್ತಿದ್ದಾರೆ ಎಂದರು. ಹೀಗಾಗಿ ನಾವು ಮೊದಲು ಜಾಗೃತವಾಗಿರಬೇಕಿರುವುದು ಇತರರ ಬಗೆಗೆ ಅಲ್ಲ, ನಮ್ಮವರ ಬಗ್ಗೆ ಎಂಬ ವಿಷಯವನ್ನು ಈ ಕವಿತೆಯು ಮೂಲಕ ತಿಳಿಸಿದ್ದಾರೆ.

ಎಚ್.ಎಸ್.ಶಿವಪ್ರಕಾಶರು ಬಹುತೇಕ ತಮ್ಮ ನಾಟಕಗಳಲ್ಲಿನ ವಿಷಯ ವಸ್ತುವನ್ನೇ ಕಾವ್ಯದಲ್ಲಿ ಬಳಸಿ. ಕಾವ್ಯ ರಚಿಸಿರುವುದನ್ನು ಕಾಣಬಹುದಾಗಿದೆ. ಇಲ್ಲಿ 'ಮಾಧವಿ' ಎಂಬ ಪೌರಾಣಿಕ ಕಥಾಭಾಗದಿಂದ ಎಲ್ಲ ಬಯಕೆಯ 'ಮಾತೆಯ' ಎಂಬ ಕವಿತೆಯಲ್ಲಿ ಪ್ರತಿಭಟನಾತ್ಮಕ ಅಂಶಗಳನ್ನು ವ್ಯಕ್ತಪಡಿಸಿದ್ದಾರೆ.

"ಉರಿಯೆ ಉರಿಯೆ ನೀನು ಉರಿಯೆ
ಎಲ್ಲ ಬಯಕೆಯ ಮಾತೆಯೆ!!
ಇರುಳ ಬೊಗಸೆಯ ನಡುವೆ ಉರಿಯುವೆ
ಜೀವ ದೀಪದ ಜ್ಯೋತಿಯೆ!!
ಕುರುಡುಗತ್ತಲ ವ್ಯೋಮವೆಲ್ಲವು
ನಿನ್ನ ಕಾಣಲು ತವಕಿಸಿ!!
ತನ್ನ ನೀಳ ಒಡಲಿನುದ್ದಕೂ
ಚಿಕ್ಕೆಗಂಗಳ ವಿರಚಿಸಿ!!
ಲಕ್ಷ ನೇತ್ರದ ನೋಡಿ ದಣಿಯದೆ
ಸತತವೂ ಕಣ್ಣಿಳುಕಿಸಿ!!
ಬೆರಗಿನೆಂದು ಜಾತ್ರೆ ನೆರೆದಿದೆ
ಕಾಲಪಥವದು ವ್ಯಾಪಿಸಿ!!
ಉರಿಯೆ ಉರಿಯೆ ನೀನು ಉರಿಯೆ
ಎಲ್ಲ ಬಯಕೆಯ ಮಾತೆಯೆ!! "[57]
(ಸೂರ್ಯಜಲ-ಎಲ್ಲ ಬಯಕೆಯ ಮಾತೆಯೆ)

ಕವಿ ಎಚ್.ಎಸ್.ಶಿವಪ್ರಕಾಶರವರು ಬಯಕೆಯೊಂದು ವ್ಯಾಪಕವಾಗಿ ಹರಡಿರುವ ಮೋಹದಂತೆ. ಆ ಮೋಹಕ್ಕೆ ಬಲಿಯಾದವರು ಪಾಶಕ್ಕೆ ಒಳಗಾಗಲೇಬೇಕೆಂಬ ಸತ್ಯವನ್ನು

ವಿವರಿಸಿರುವರು. ಬೆಳಕು ಜ್ಞಾನದ ಸಂಕೇತ. ಭವದ ಅರಿವನ್ನು ಬೆಳಗುವ ಶಕ್ತಿಯಿದೆ. ಹಾಗಾಗಿ 'ಉರಿಯೆ ಉರಿಯೆ' ಎಂಬ ಮಾತುಗಳು ಪ್ರಜ್ಞೆಯನ್ನು ಎಚ್ಚರಿಸುವಂತೆ ಬಳಸಿದ್ದಾರೆ. ಆದರೆ ಇಂದು ಬೆಳಕು ಕೂಡ ಮಲಿನವಾಗುತ್ತಿದೆ. ಆ ಬೆಳಕಿನ ಭರವಸೆಗಾಗಿ ಮತ್ತು ಉಳಿಕೆಗಾಗಿ ನಾವೆಲ್ಲರೂ ಪ್ರತಿಭಟಿಸಬೇಕಿದೆ. ಬೆಳಕು ರಾತ್ರಿಯ ಸಂದರ್ಭದಲ್ಲಿ ಉರಿಯದೆ ಜೀವ ಹಿಂಡುವ ದೀಪವಾಗಿ ಬೆಳಗುತ್ತಿದೆ. ಶ್ರೀಮಂತರ ಮನೆಯಂಗಳದಲ್ಲಿ ಬೆಳಗುವ ಬೆಳಕು ಬಡವರಿಗೆ ತಂದ ಆಪತ್ತಾಗಿದೆ. ಬಡವರೆಲ್ಲ ಬೆಳಕಿನಲ್ಲಿ ಬೆಳಗಿ ತನ್ನವರನ್ನೆಲ್ಲ ಕಾಣಬೇಕೆಂಬ ತವಕದಲ್ಲಿ ಅನಾಥರಾಗಿ

ಆಕಾಶವನ್ನೇ ನೋಡಿ ಖುಷಿ ಪಡಬೇಕಾದಂತಹ ಅನಿವಾರ್ಯತೆ ಉಂಟಾಗಿದೆ. 'ಬೆಳಗು' ಎಂಬುದು ಸರ್ವರ ಸಕಾಲದ ಸಂಕೇತವಾಗಿದೆ. ಆದರೆ ಬಹುತೇಕ ಕುಟುಂಬಗಳು ಹೊಟ್ಟೆಗೆ ಅನ್ನ ಕಾಣದೇ ಇರುವಾಗ, ದೀಪದಲ್ಲಿ ಎಣ್ಣೆ ಎಲ್ಲಿ ಕಾಣುವುದು ಎಂಬುದು ಲೇಖಕರ ಅಭಿಪ್ರಾಯವಾಗಿದೆ. ಎಲ್ಲರೂ ಸಮಾನತೆಯ ಆಶಯದಲ್ಲಿ ಬದುಕಬೇಕೆಂಬ ನಿಲುವಾಗಿದೆ.
ಶಿವಪ್ರಕಾಶ ಅವರ ಮತ್ತೊಂದು ಕವಿತೆಯಾದ 'ವಚನ ಕನ್ನಡಿಯಲ್ಲಿ ಮುಖ'ವು ಬಂಡಾಯದ ಮನೋಭೂಮಿಕೆಯಲ್ಲಿ ಮೂಡಿಬಂದ ಕವಿತೆಯಾಗಿದೆ. ಅದು,

"ಕನ್ನಡಿಯಲ್ಲಿ ಮುಖ ನೋಡಿಕೊಂಬುದು
ಕಣ್ಣ ಬೇಟವಯ್ಯ
ಆದರೆ
ಕನ್ನಡಿಯಲ್ಲಿ ಕನ್ನಡಿ ತನ್ನ ಮುಖ ನೋಡಿಕೊಂಬುದು
ಅಥವಾ
ಮುಖದಲ್ಲಿ ಮುಖ ತನ್ನ ಮುಖ ನೋಡಿಕೊಂಬುದು
ನೀವು ಏನೆಂಬಿರಯ್ಯ?
ಹುಟ್ಟು ಬೇಸಗೆಯಲ್ಲಿ ಸುಳಿವ ಮಳೆಯ ಹವಾ
ಸುಡುಗಾಡುಗಳ ದಂಡೆಯ ದೇವಗಣಗಿಲೆ ಹೂವು
ತಿಳಿನೀರು ಕೊಳದಲ್ಲಿ ತೇಲುವ ವಿಧಾನ
ಜಿಂಕೆಗಣ್ಣಲ್ಲಿ ಝಗ್ಗೆಂದು ತೋರುವ ತೋರು ಹುಲಿ
ರಣರಂಗದಲ್ಲಿ ಮೊಟ್ಟೆಯಿಕ್ಕುತ್ತಾ ಬಂದ ತಾಯಿನಾಗರ
ವಳನೇಸರು ಕುಣಿವ ರಂಗಸ್ಥಲದಲ್ಲಿ ಸೀಳ್ ಮಿಂಚು; ಬರಸಿಡಿಲು
ಇವೆಲ್ಲವನ್ನೂ ಏನೆಂಬಿರಯ್ಯ?
ಕಣ್ಣಲ್ಲಿ ಕನ್ನಡಿಯಯ್ಯ
ಕನ್ನಡಿಯಲ್ಲಿ ಕನ್ನಡಿಯಯ್ಯ
ನಿಮ್ಮಲ್ಲಿ ನಾನಯ್ಯ
ನನ್ನಲ್ಲಿ ನೀನಯ್ಯ
ಶಿವಲಿಂಗಯ್ಯ"[58]
(ಮತ್ತೆ ಮತ್ತೆ – ವಚನ: ಕನ್ನಡಿಯಲ್ಲಿ ಮುಖ)

ಕನ್ನಡ ಸಾಹಿತ್ಯದ ಅತ್ಯಂತ ಪ್ರಜ್ಞಾಶೀಲ ಹಾಗೂ ಸಂವೇದನೆಯ ಕವಿ ಎಚ್.ಎಸ್.ಶಿವಪ್ರಕಾಶ ಅವರು ರಚಿಸಿದ ಈ ಕವಿತೆಯಲ್ಲಿ ಸೃಜನಶೀಲವಾದ ಶಕ್ತಿಯಿದೆ. ಬಂಡಾಯದ ಮನೋಭೂಮಿಕೆಯಿದೆ. ಯಾಂತ್ರಿಕತೆ ಮತ್ತು ಯಾತ್ರಿಗಳ ಮನಸಲ್ಲಿ ಮೂಡುವ ಚಿತ್ರಗಳ ಮೂಲಕ ಕಣ್ಣಿಗೆ ಕಾಣುವಂತೆ ಕಟ್ಟಿಕೊಟ್ಟಿದ್ದಾರೆ. ಕವಿತೆಯು ಬಗ್ಗೆ ಯೋಚಿಸುತ್ತಿರುವಾಗ ಅದರ ಕಣ್ಣು ತನ್ನನ್ನೇ ಬಿಡುವುದಿಲ್ಲ ಒಂದು ದೀರ್ಘವಾದ ಮುಕ್ತಕದಲ್ಲಿ ಅವರು ತಮ್ಮನ್ನು ತಾವೇ 'ಉಪಮೇಯರೋಗಿ' ಎಂದು ಕರೆದುಕೊಂಡಿದ್ದಾರೆ.
ಎಚ್.ಎಸ್.ಶಿವಪ್ರಕಾಶರು ಮೂಲತಃ ಅಸ್ತಿತ್ವದ ವಿಚಾರಗಳನ್ನು ಇಟ್ಟುಕೊಂಡು ಸಾಹಿತ್ಯ ರಚಿಸಿದರೂ ಬಂಡಾಯದ ಪಡೆನುಡಿಗಳಿವೆ. ಕನ್ನಡಿಯಲ್ಲಿ ನಮ್ಮ ಮುಖವು ಪ್ರತಿಬಿಂಬದಂತೆ ಕಂಡ ಹಾಗೆ. ಬರಹಗಾರನಿಗೂ ಕೂಡ ಸಮಾಜವನ್ನು ಕಂಡಾಗ ಅಲ್ಲಿನ ನೋವು–ಹತಾಶೆ, ಸಂಕಷ್ಟದ ಜೊತೆಗೆ ಸಹಬಾಳ್ವೆ, ಸಹಜೀವನದ ಸಂಗತಿಗಳನ್ನು ಕಾಣಬೇಕಾಗುತ್ತದೆ. ಆಗ ಆ ಲೇಖಕರು ಒಬ್ಬ ಪರಿಪೂರ್ಣ ಬರಹಗಾರನಾಗುತ್ತಾನೆ. ಬಿಂಬ ಮತ್ತು ಪ್ರತಿಬಿಂಬವು ಒಂದಕ್ಕೊಂದು ಸ್ಪಂದಿಸಿದಾಗ ಆಗುವ ಅನುಭವ ಮತ್ತು ನಿರಾಳವಾದ ಭಾವನೆ ಮೂಡುವಂತೆ, ನಾವುಗಳು ಒಬ್ಬರ ಮುಖವನ್ನು ಒಬ್ಬರು ನೋಡಿದಾಗ ಆ ರೀತಿಯ ಭಾವನೆ ತಾಳಲಾರದೇ ಸಂತೋಷ, ಸಂಭ್ರಮಗಳ ಜೊತೆಗೆ ಭಂಡತನದ ಧೈರ್ಯವೂ ಒಂದಾಗಿರಬೇಕು. ಅದನ್ನೇ ಪ್ರತಿರೋಧ ಎನ್ನುವರು. ಮಳೆಗಾಲದಲ್ಲಿ ತಿಪ್ಪೆ ಮತ್ತು ಸ್ಮಶಾನದಲ್ಲಿ ಹುಟ್ಟುವ ಛತರಿಗಳಂತೆ ನಾವಾಗಬಾರದು. ಬದಲಾಗಿ ದಿನ ಬೆಳಗುವ ಸೂರ್ಯನಂತೆ ಅತ್ತಿಂದಿತ್ತ ಅಲೆದಾಡುತ್ತಾ, ಪರರ ಹಿತಕ್ಕಾಗಿ ಬದುಕನ್ನು ಸವೆಸಬೇಕೆಂದಿದ್ದಾರೆ. ಹೀಗೆ ವಾಸ್ತವವು ಸತ್ಯಕ್ಕೆ ಹತ್ತಿರವಾಗುತ್ತದೆ. ಸತ್ಯವು ಕೂಡ ವಾಸ್ತವವಾಗಿರುತ್ತದೆ. ಅದರಂತೆಯೇ ರಂಗಭೂಮಿ ಸತ್ಯಕ್ಕೆ ಹತ್ತಿರವಾಗಿರುತ್ತದೆ. ಸತ್ಯವು ಕೂಡ ವಾಸ್ತವಾಗಿರುತ್ತದೆ. ಅದರಂತೆಯೇ ರಂಗಭೂಮಿಯು ಮಂಟಪದ ಮೇಲೆ ಕುಣಿಯುವಾಗ ಆಗುವ ಅನುಭವ ನೆಲದ ಮೇಲೆ ಕುಣಿವಾಗ ಆಗುವುದಿಲ್ಲ. ಅದಕ್ಕಾಗಿ ನಮಗೆಲ್ಲ ಮೈಯೆಲ್ಲಾ ಕಣ್ಣಾಗಿರಬೇಕು ಮತ್ತು ಕಣ್ಣು ಕನ್ನಡಿಯಾಗಿರಬೇಕು ಎನ್ನುವ ತಾತ್ವಿಕ ಸಂದೇಶವನ್ನು ಶಿವಪ್ರಕಾಶರು ಈ ಕಾವ್ಯದ ಮೂಲಕ ನೀಡಿದ್ದಾರೆ.

**ಆಕರಗ್ರಂಥಗಳು**


1. ಮಿಲರೇಪ – 1977
2. ಮಳೆಬಿದ್ದ ನೆಲದಲ್ಲಿ – 1983
3. ಅಣುಕ್ಷಣ ಚರಿತೆ – 1990
4. ಸೂರ್ಯಜಲ – 1995
5. ನವಿಲು ನಾಗರ – 1996
6. ಮಳೆಯೇ ಮಂಟಪ – 2002
7. ಮತ್ತೆ ಮತ್ತೆ – 2005
8. ಮಬ್ಬಿನ ಹಾಗೆ ಕಣಿವೆಯಾಸಿ – 2008
9. ಕವಿತೆ: ಇಂದಿನತನಕ – 2010 (ಇವರ ಸಮಗ್ರ ಕವಿತೆಗಳ ಸಂಕಲನ)
10. ಮಾತು ಮಂತ್ರವಾಗುವವರೆಗೆ – 2012